ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 3, ಸಂಚಿಕೆ 3, ಜನವರಿ 2025
SHRIDEVI ANTARANGA
Monthly Magazine




SHRIDEVI EDUCATION

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



## ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ದೇಶ ಕಂಡ ಮಹಾನ್ ಪ್ರಧಾನಿ



2024ರ ಡಿಸೆಂಬರ್ 26ರಂದು ರಾತ್ರಿ 9.51ಕ್ಕೆ ಮಾಜಿ ಪ್ರಧಾನಿ ಡಾ. ಮನಮೋಹನಸಿಂಗ್ (1932–2024) ನಿಧನರಾದರೆಂಬ ವಾರ್ತೆಯನ್ನು ಸುದ್ದಿವಾಹಿನಿಗಳು ಬಿತ್ತರಿಸಿದವು. ಡಾ. ಮನಮೋಹನಸಿಂಗ್ ಅವರು ಬಹಳ ಕಾಲದಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರ ಮನೆಯನ್ನೇ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿತ್ತು. ಆ ಸಂಜೆ ಅವರಿಗೆ ಉಸಿರಾಟದ ಸಮಸ್ಯೆ ಎದುರಾದಾಗ ಅವರನ್ನು ದೆಹಲಿಯ 'ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ' (ಏಮ್ಸ್) ಆಸ್ಪತ್ರೆಗೆ ಕರೆತರಲಾಯಿತು. ವೈದ್ಯರ ಎಲ್ಲ ಪ್ರಯತ್ನಗಳೂ ವಿಫಲಗೊಂಡು ಡಾ. ಮನಮೋಹನಸಿಂಗ್ ಇಹಲೋಕವನ್ನು ತ್ಯಜಿಸಿದರು.

ಭಾರತದ ರಾಜಕೀಯ ಇತಿಹಾಸದಲ್ಲಿ ಮೂವರು ಪ್ರಧಾನಿಗಳು ಅತ್ಯಂತ ಪ್ರಾಮಾಣಿಕರೆಂದು ಜನಮನದಲ್ಲಿ ಪ್ರತಿಷ್ಠಾಪಿತರಾಗಿದ್ದಾರೆ, ಅವರುಗಳೆಂದರೆ ಎರಡು ಸಲ ಹಂಗಾಮಿ ಪ್ರಧಾನಿಯಾಗಿದ್ದ ಗುಲ್ಜಾರಿಲಾಲಾ ನಂದಾ, ನೆಹರೂ ಅವರ ಅನಂತರ ಪ್ರಧಾನಿಯಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿ ಹಾಗೂ 2004ರಲ್ಲಿ ಪ್ರಧಾನಿಯಾದ ಡಾ. ಮನಮೋಹನಸಿಂಗ್. ಡಾ. ಮನಮೋಹನಸಿಂಗ್ ಅವರು ಹತ್ತು ವರ್ಷಗಳಷ್ಟು ದೀರ್ಘಕಾಲ ಪ್ರಧಾನಮಂತ್ರಿಯಾಗಿ ಅಧಿಕಾರ ನಿರ್ವಹಣೆ ಮಾಡಿದ್ದಾರೆ.

ಡಾ. ಮನಮೋಹನಸಿಂಗ್ ವೃತ್ತಿನಿರತ ರಾಜಕಾರಣಿಯಲ್ಲ, ಅವರೊಬ್ಬ ಅರ್ಥಶಾಸ್ತ್ರಜ್ಞ, ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಗಳಿಸಿ, ಅನಂತರ ಪಿಎಚ್.ಡಿ. ಪದವಿಯನ್ನು ಇಂಗ್ಲೆಂಡಿನ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳಿಂದ ಗಳಿಸಿದರು,

ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಮನಮೋಹನಸಿಂಗ್ ಅವರನ್ನು ಶ್ರೀಮತಿ ಇಂದಿರಾಗಾಂಧಿಯವರು 1971ರಲ್ಲಿ ಭಾರತ ಸರ್ಕಾರದ ಹಣಕಾಸು ಸಚಿವಾಲಯದ ಸಲಹೆಗಾರರಾಗಿ ನೇಮಿಸಿಕೊಳ್ಳುತ್ತಾರೆ. ಅನಂತರ ಅವರು ಹಣಕಾಸು ಸಚಿವಾಲಯದ ಕಾರ್ಯದರ್ಶಿಯಾಗಿಯೂ ಕರ್ತವ್ಯ ನಿರ್ವಹಿಸುತ್ತಾರೆ.

1982ರಲ್ಲಿ ಭಾರತದ ರಿಸರ್ವ್ ಬ್ಯಾಂಕ್ ಗೌವರ್ನರ್ ಆಗಿ, 1985ರಲ್ಲಿ ಭಾರತ ಸರ್ಕಾರದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಅಂತಾರಾಷ್ಟ್ರೀಯ ಹಣಕಾಸು ಸಮಿತಿಯಲ್ಲಿ ಭಾರತದ ಪರವಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ.

▶▶ 2ನೇ ಪುಟಕ್ಕೆ...

# ಗುಣಮಟ್ಟದ ಶಿಕ್ಷಣಕ್ಕೆ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ ಮಾದರಿ




**ಪ್ರತಿಭಾನ್ವಿತ ವಿದ್ಯಾರ್ಥಿವೇತನ ಪ್ರದಾನ ಸಮಾರಂಭದಲ್ಲಿ ಮೇಘಾಲಯ ರಾಜ್ಯಪಾಲರಾದ ಸಿ.ಹೆಚ್.ವಿಜಯಶಂಕರ್, ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ. ರಮಣ್ ಆರ್ ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಡಾ.ಲಾವಣ್ಯ ರಮಣ, ಶ್ರೀಮತಿ ಅಂಬಿಕಾ ಎಂ ಹುಲಿನಾಯ್ಕರ್ ಮತ್ತು ಡಾ.ನರೇಂದ್ರ ವಿಶ್ವನಾಥ್.**

▪ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

"ಶಿಸ್ತು ಬದ್ಧ ಜೀವನ, ಪುರುಷ ಪ್ರಯತ್ನ, ದೇವಿಶಕ್ತಿಯಲ್ಲಿ ಅಚಲ ನಂಬಿಕೆ. ಸಮಾಜಮುಖಿ ಚಿಂತನೆ ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ಅವರು ಕಟ್ಟಿ ಬೆಳೆಸಿದ ಶಿಕ್ಷಣ ಸಂಸ್ಥೆಗಳನ್ನು ಹಣತೆಯಂತೆ ಬೆಳಗಿಸುತ್ತಿವೆ. ಶ್ರೀದೇವಿ ತೇರನ್ನು ಮುಂದಕ್ಕೆ "ಮುಂದಕ್ಕೆ ಎಳೆಯಲು ಎಲ್ಲರ ಸಹಕಾರವೂ ಅಷ್ಟೇ ಮುಖ್ಯ" ಎಂದು ಮೇಘಾಲಯದ ರಾಜ್ಯಪಾಲ ಸಿ.ಎಚ್. ವಿಜಯಶಂಕರ್ ಪ್ರತಿಪಾದಿಸಿದ್ದಾರೆ.

ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಇತ್ತೀಚೆಗೆ ಜರುಗಿದ 'ಕನಕ ಡಾ.ಎಂ.ಆರ್.ಹುಲಿನಾಯ್ಕರ್' ಹಾಗೂ 'ಅಹಲ್ಯಾಬಾಯಿ ಶ್ರೀಮತಿ ಶಾಂತಾದುರ್ಗಾದೇವಿ ಎಂ. ಹುಲಿನಾಯ್ಕರ್' ಅವರ ಹೆಸರಿನಲ್ಲಿ ಸಂಸ್ಥೆ ಸ್ಥಾಪಿಸಿದ ವಿದ್ಯಾರ್ಥಿವೇತನ ಪ್ರಶಸ್ತಿಯನ್ನು ವಿತರಿಸಿ ಮಾಡಿದ ಭಾಷಣದ ಸಾರಾಂಶ.

"ಕಲ್ಪತರುನಾಡು ತುಮಕೂರುಜಿಲ್ಲೆ ವಿದ್ಯಾಸಂಸ್ಥೆಗಳ ತವರೂರು. ವಿದ್ಯಾಕಾಶಿ. ಗುಣಮಟ್ಟದ ಶಿಕ್ಷಣಕ್ಕೆ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳು ಹೆಸರುವಾಸಿಯಾಗಿದೆ. ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ, ಧಾರವಾಡ ನಗರಗಳಂತೆ ಪ್ರಮುಖ ವಿದ್ಯಾ ಕೇಂದ್ರವಾಗಿದೆ. ರಾಜ್ಯದ ಶೈಕ್ಷಣಿಕ ಹಬ್ ಆಗಿ ಪರಿವರ್ತನೆಯಾಗಿದೆ. ಶಿಕ್ಷಣ ಎಂಬುದು ಯಾರು ಕದಿಯಲಾರದ ಅಮೂಲ್ಯ, ಶಾಶ್ವತ ಆಸ್ತಿ. ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಅವರ ಪ್ರಯತ್ನ ದೂರದೃಷ್ಟಿ, ಮಾನವೀಯ ಚಿಂತನೆ ಅನನ್ಯವಾಗಿದೆ.

"ಧಾರವಾಡದ ನವಲಗುಂದದಿಂದ ಬಂದು ತುಮಕೂರಿನಂತಹ ನಗರದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ, ಬಹಳ ಯಶಸ್ವಿಯಾಗಿ ನಡೆಸುತ್ತಿದ್ದಾರೆ, ಅಷ್ಟೇಅಲ್ಲ, ಜನರಿಂದಲೂ ಒಳ್ಳೆಯ ಹೆಸರುಪಡೆದಿದ್ದಾರೆ. ಇದು ಕಡಿಮೆ ಸಾಧನೆಯಲ್ಲ, ಪುರುಷಪ್ರಯತ್ನದಲ್ಲಿ ನಂಬಿಕೆ, ವಿಶ್ವಾಸವಿಟ್ಟು ನಡೆಯುವವರಿಗೆ ಎಂದಿಗೂ ಸೋಲು ಉಂಟಾಗುವುದಿಲ್ಲ. ಸತ್ ಶಕ್ತಿಗಳು ಕೈ ಹಿಡಿಯುತ್ತವೆ. ಅದೃಷ್ಟ ಮನೆ ಬಾಗಿಲಿಗೆ ಬರುತ್ತದೆ. ಅವರ ಕುಟುಂಬದ ಬಾಳಿನಲ್ಲಿ ಸದಾ ಬೆಳಕೆ ಇರುತ್ತದೆ. ತುಮಕೂರಿನ ಶ್ರೀ ಸಿದ್ಧಗಂಗಾಮಠ ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವತಂಹ ಅದರ್ಶದ ಪುಣ್ಯಭೂಮಿ. ತುಮಕೂರಿನ ದಾಸೋಹದ ಕೀರ್ತಿ ಜಗತ್ತಿಗೆ ಪಸರಿಸಲು ಕಾರಣವಾಗಿದೆ.

"ಡಾ. ಹುಲಿನಾಯ್ಕರ್ ಅವರು ಹಣಮಾಡಬೇಕೆಂದು ಮನಸ್ಸು ಮಾಡಿದ್ದರೆ, ಈ ಜಾಗದಲ್ಲಿ ವಾಣಿಜ್ಯ ಸಂಕೀರ್ಣ ಅಥವಾ ಕಲ್ಯಾಣಮಂಟಪ ಕಟ್ಟಿಸಿ ಬೇಕಾದ ರೀತಿಯಲ್ಲಿ ಸಂಪಾದನೆ ಮಾಡಬಹುದಿತ್ತು. ಅದರೆ ಸಮಾಜಕ್ಕೆ ಬೆಳಕು ಕೊಡುವ ಭವಿಷ್ಯಕ್ಕೆ ದಾರಿ ಮಾಡಿಕೊಡುವ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಮಾದರಿಯಾಗಿದ್ದಾರೆ. ಅದರ್ಶ ಪ್ರಾಯರಾಗಿದ್ದಾರೆ. ಹತ್ತು ವರ್ಷಗಳ ಹಿಂದೆ ಶ್ರೀದುಗಾಂಬಿಕಾದೇವಿಯ ದೇವಸ್ಥಾನದ ಕೆಲಸ ಆರಂಭವಾಗಿದ್ದಾಗ ನಾನು ಇಲ್ಲಿಗೆ ಭೇಟಿ ನೀಡಿದ್ದೆ, ದುರ್ಗೆ ಶಕ್ತಿದೇವತೆಗಳ ರೂಪ. ಆಕೆ ನೆಲೆಸಿರುವ ಜಾಗದಲ್ಲಿ ಕತ್ತಲು ಕವಿಯಲು ಸಾಧ್ಯವೇ ಇಲ್ಲ. ಸದಾ ಬೆಳಕು ಸದಾ ಒಳಿತು ಆಗುತ್ತದೆ. ಹತ್ತು ವರ್ಷಗಳ ನಂತರ ಇಲ್ಲಿಗೆ ಬಂದಿದ್ದೇನೆ ಸಂಸ್ಥೆ ಬೃಹದಾಕಾರವಾಗಿ ಬೆಳೆದಿರುವುದನ್ನು ನೋಡಿದಾಗ ನನ್ನ ಮಾತು ನೂರಕ್ಕೆ ನೂರು ಸತ್ಯವಾಗಿದೆ".

### ಮಾನ್ಯ ರಾಜ್ಯಪಾಲರು ಕಂಡ ಡಾ.ಹುಲಿನಾಯ್ಕರ್ ಕುಟುಂಬ

ಶಿಕ್ಷಣ ಸಂಸ್ಥೆಗಳನ್ನು ಮಾದರಿ ಸಂಸ್ಥೆಯನ್ನಾಗಿ ರೂಪಿಸಿರುವ ಹುಲಿನಾಯ್ಕರ್ ಕುಟುಂಬ ಮಾದರಿ, ಆದರ್ಶದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡವಿರುವ ಸುಸಂಸ್ಕೃತ ಕುಟುಂಬ. 'ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು' ಎಂಬ ನಾಣ್ಣುಡಿಯಂತೆ ಅದೃಷ್ಟ ಕೈಹಿಡಿದು ಲಕ್ಷ್ಮಿ ಒಲಿದು ಬಂದಾಗ ಬೆಳೆದು ಬಂದ ಹಿಂದಿನ ದಾರಿ ಮರೆಯುವವರು ಹೆಚ್ಚು. ಆದರೆ ಡಾ.ಹುಲಿನಾಯ್ಕರ್ ಮತ್ತು ಅವರ ಕುಟುಂಬದ ಸದಸ್ಯರು ಬೆಳೆದ ದಾರಿ ಮತ್ತು ಹತ್ತಿದ ಏಣಿಯನ್ನು ಎಂದೂ ಮರೆತವರಲ್ಲ, ಒದ್ದವರೂ ಅಲ್ಲ, ಅಹಂಕಾರ ಪಟ್ಟವರೂ ಅಲ್ಲ. ಇಡೀ ಕುಟುಂಬದಲ್ಲಿ ಸಮಾಜಮುಖಿ ಚಿಂತನೆಯಿದೆ. ಮನೆಯ ಯಜಮಾನರ ಆಲೋಚನೆಗಳಿಗೆ ಕುಟುಂಬದ ಸದಸ್ಯರು ಪೂರ್ಣಪ್ರಮಾಣದಲ್ಲಿ ಸಾಥ್ ಕೊಡುತ್ತಿರುವುದು ಉತ್ತಮ ಸಂಸ್ಕಾರಕ್ಕೆ ಹಿಡಿದ ಕನ್ನಡಿ ಆಗಿದೆ.

ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಪಾತ್ರ ಇದ್ದೇ ಇರುತ್ತದೆ. ಅದು ಇಲ್ಲಿಯೂ ಕೂಡ ಸತ್ಯ. ಡಾ.ಹುಲಿನಾಯ್ಕರ್ ಅವರ ಸಮಾಜ ಸೇವೆ, ಉದಾತ ಚಿಂತನೆಯ ದೈತ್ಯಶಕ್ತಿಯ ಹಿಂದೆ ಅವರ ಶ್ರೀಮತಿ ಶಾಂತದುರ್ಗಾದೇವಿ ಹುಲಿನಾಯ್ಕರ್ ಅವರ ಪರಿಶ್ರಮವಿದೆ. ತ್ಯಾಗವಿದೆ. ಕೊಡುಗೆಯಿದೆ.

▶▶ 7ನೇ ಪುಟಕ್ಕೆ...

▸▸ ಮೊದಲನೇ ಪುಟದಿಂದ

# ದೇಶ ಕಂಡ ಮಹಾನ್ ಪ್ರಧಾನಿ

ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಅಧ್ಯಕ್ಷರಾಗಿಯೂ ಕೆಲಸ ಮಾಡಿರುತ್ತಾರೆ. ಹೀಗೆ ಡಾ. ಮನಮೋಹನಸಿಂಗ್ ಅವರ ಕಾರ್ಯವ್ಯಾಪ್ತಿ ಬಹಳ ದೊಡ್ಡದು. ಈ ಹೊತ್ತಿಗೆ ಅವರು ರಾಷ್ಟ್ರದ ಶ್ರೇಷ್ಠ ಅರ್ಥಶಾಸ್ತ್ರಜ್ಞರೆಂದು ಪ್ರಸಿದ್ಧರಾಗಿದ್ದರು. ಅಕಾಡೆಮಿಕ್ ವಲಯದಲ್ಲಿ ಅವರಿಗೆ ಅತ್ಯುನ್ನತವಾದ ಸ್ಥಾನವಿತ್ತು.

ಡಾ. ಮನಮೋಹನಸಿಂಗ್ ಅವರದು ಸುಖೀಕುಟುಂಬ. ಮಡದಿ ಗುರುಶರಣ್‌ಕೌರ್. ಅವರಿಗೆ ಉಪೀಂದ್ರ ಸಿಂಗ್, ದಮನ್ ಸಿಂಗ್ ಹಾಗೂ ಅಮೃತ್ ಸಿಂಗ್ ಎಂಬ ಮೂವರು ಪುತ್ರಿಯರು. ಮಕ್ಕಳು ಡಾ. ಮನಮೋಹನಸಿಂಗ್ ಆಶಯದಂತೆಯೇ ಸರಳ ಜೀವನವನ್ನು ನಡೆಸುತ್ತಿದ್ದಾರೆ. ಮೂವರು ಪುತ್ರಿಯರೂ ಇತಿಹಾಸ ಸಾಹಿತ್ಯ ಹಾಗೂ ವಕೀಲಿಕ್ಷೇತ್ರದಲ್ಲಿ ತಮ್ಮ ಪ್ರತಿಭೆಯಿಂದ ಬೆಳಗುತ್ತಿದ್ದಾರೆ. ಇನ್ನು ಗುರುಶರಣ್ ಕೌರ್ ಅವರು ಇತಿಹಾಸದಲ್ಲಿ ಎಂ.ಎ. ಮಾಡಿದ್ದರೂ ಅಪ್ಪಟ ಗೃಹಿಣಿ.

ಡಾ. ಮನಮೋಹನಸಿಂಗ್ ಅವರಿಗೆ ಮಾರುತಿ 800 ಪ್ರಿಯವಾದ ವಾಹನ. ತಾವೇ ಅದನ್ನು ಚಾಲನೆ ಮಾಡಿಕೊಂಡು ಕಚೇರಿಗೂ ಹೋಗುತ್ತಿದ್ದರು. ಇಂತಹ ಸರಳತೆಯ ಪ್ರತಿರೂಪವೆನಿಸಿದ್ದ ಡಾ. ಮನಮೋಹನಸಿಂಗ್ ಅವರಿಗೆ 1991ರ ಜೂನ್ ತಿಂಗಳಲ್ಲಿ ಪ್ರಧಾನಿ ಪಿ.ವಿ. ನರಸಿಂಹರಾವ್ ಕಚೇರಿಯಿಂದ "ಸಂಜೆ 5ಗಂಟೆಗೆ ನೀವು ರಾಷ್ಟ್ರಪತಿ ಭವನಕ್ಕೆ ಬಂದು ಭಾರತ ಸರ್ಕಾರದ ಹಣಕಾಸು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಬೇಕು" ಎಂಬ ದೂರವಾಣಿ ಕರೆ ಬರುತ್ತದೆ.

ಈ ಆಕಸ್ಮಿಕ ಆಹ್ವಾನ ಡಾ. ಮನಮೋಹನಸಿಂಗ್ ಅವರಿಗೆ ಮಾತ್ರವಲ್ಲ, ಭಾರತದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಕ್ಕೆ ಕೂಡ ಹೊಸತಿರುವು ಕೊಡುವ ಘಟನೆ ಎಂದೇ ಪರಿಗಣಿತವಾಗಿದೆ.

ವಿ.ಪಿ. ಸಿಂಗ್ ಮತ್ತು ಚಂದ್ರಶೇಖರ್ ಅವರು ಪ್ರಧಾನಿಗಳಾಗಿದ್ದ ಕಾಲದಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ತೀವ್ರ ದುಸ್ಥಿತಿಯಲ್ಲಿತ್ತು. ಚಂದ್ರಶೇಖರ್ ಅವರು ಸರ್ಕಾರದಲ್ಲಿ ಸಾಕಷ್ಟು ವಿದೇಶಿ ವಿನಿಮಯವಿಲ್ಲದ ಕಾರಣದಿಂದ ದೇಶದ ಚಿನ್ನವನ್ನು ಇಂಗ್ಲೆಂಡಿನ ಬ್ಯಾಂಕ್‌ವೊಂದರಲ್ಲಿ ಅಡವಿಟ್ಟು ವಿದೇಶೀ ವಿನಿಮಯದ ಮಟ್ಟವನ್ನು ಕಾಪಾಡಿಕೊಂಡರು.

1991 ಜೂನ್ 24ರಂದು ದೇಶದ ಅರ್ಥಸಚಿವರಾಗಿ ಡಾ. ಮನಮೋಹನಸಿಂಗ್ ಮಂಡಿಸಿದ ಮೊದಲ ಆಯವ್ಯಯವು ದೇಶದ ಆರ್ಥಿಕಕ್ಷೇತ್ರದ ದಿಕ್ಕನ್ನು ಸಂಪೂರ್ಣವಾಗಿ ಬದಲಾಯಿಸಿತು. ಅಲ್ಲಿಯವರೆಗೆ ದೇಶದ ಆರ್ಥಿಕತೆಯನ್ನು ನಿಯಂತ್ರಿಸುತ್ತಿದ್ದ ಲೈಸೆನ್ಸ್ ಮತ್ತು ಪರ್ಮಿಟ್‌ಗಳ ಪಾಶವನ್ನು ಕಿತ್ತುಹಾಕಲಾಯಿತು. ಭಾರತದ ಆರ್ಥಿಕಕ್ಷೇತ್ರ ಜಗತ್ತಿಗೆ ತೆರೆದುಕೊಂಡಿತು. 'ವಿಶ್ವವ್ಯಾಪಾರೀಕರಣ' 'ಜಾಗತೀಕರಣ' 'ಉದಾರೀಕರಣಗಳು' ಒಮ್ಮೆಲೇ ಅನುಷ್ಠಾನಗೊಂಡವು. ಭಾರತದ ಉದ್ಯಮ ಕ್ಷೇತ್ರಕ್ಕೆ ಸಾವಿರಾರು ಕೋಟಿ ವಿದೇಶಿ ಬಂಡವಾಳ ಹರಿದು ಬಂತು. ಒಂದು ಸಮಯದಲ್ಲಿ ವಿದೇಶಿ ವಿನಿಮಯದ ಕೊರತೆ ಅನುಭವಿಸುತ್ತಿದ್ದ ಭಾರತದ ಆರ್ಥಿಕಕ್ಷೇತ್ರದಲ್ಲಿ ಯಥೇಚ್ಛವಾದ ಸಂಪನ್ಮೂಲ ಕ್ರೋಡೀಕರಣವಾಯಿತು. ನಿರೀಕ್ಷೆಗೂ ಮೀರಿದಂತೆ ಉದ್ಯೋಗಗಳು ಸೃಷ್ಟಿಯಾದವು. ಒಂದು ದಶಕದಲ್ಲಿ ಭಾರತವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದಲ್ಲೇ ಪ್ರಮುಖ ಕೇಂದ್ರವೆಂದು ಪರಿಗಣಿತವಾಯಿತು.

ಡಾ. ಮನಮೋಹನಸಿಂಗ್ ಅವರ ಅಧಿಕಾರಾವಧಿಯಲ್ಲಿ ಮತ್ತು ಅನಂತರದ ಸಮಯದಲ್ಲಿ ಭಾರತದ ಆರ್ಥಿಕಕ್ಷೇತ್ರದ ಕೆಲವು ವಿಭಾಗಗಳಲ್ಲಿ ಕಂಡುಬಂದಿರುವ ಹಿನ್ನಡೆಗೆ ಡಾ. ಸಿಂಗ್ ಅವರು ಅಂದು ತಂದ ಉದಾರೀಕರಣದ ನೀತಿ ಕಾರಣವೆಂದು ಕೆಲವರು ಟೀಕಿಸುತ್ತಾರೆ. ಈ ಅಭಿಪ್ರಾಯ ಸರಿಯಲ್ಲ, ರಷ್ಯಾ, ಚೀನಾದಂತಹ ಕಮ್ಯುನಿಸ್ಟ್ ರಾಷ್ಟ್ರಗಳೂ ಸಹ ಉದಾರೀಕರಣದ ನೀತಿಯನ್ನು ಅಳವಡಿಸಿಕೊಂಡಿವೆ. ಅದರಲ್ಲೂ ಚೀನಾ ಈ ನೀತಿಯಿಂದಾಗಿ ಆರ್ಥಿಕ ಚಟುವಟಿಕೆಗಳಲ್ಲಿ ವಿಶ್ವದ ಪ್ರಮುಖ ರಾಷ್ಟ್ರವೆಂಬ ಮಾನ್ಯತೆಯನ್ನು ಪಡೆದಿದೆ. ಉದಾರೀಕರಣ ಎನ್ನುವುದು ಆಯುಧ ಮಾತ್ರ. ಆ ಆಯುಧವನ್ನು ಆತ್ಮರಕ್ಷಣೆಗೂ ಬಳಸಬಹುದು. ಆತ್ಮಹತ್ಯೆಗೂ ಬಳಕೆಮಾಡಬಹುದು. ಮುಂದಿನ ಆಡಳಿಗಾರರು ಉದಾರೀಕರಣದ ಹೆಸರಿನಲ್ಲಿ ದೇಶ ಸಾರ್ವಜನಿಕ ಉದ್ಯಮಗಳ ಕತ್ತು ಹಿಸುಕಿದರೆ ಅದಕ್ಕೆ ಡಾ. ಮನಮೋಹನಸಿಂಗ್ ಹೇಗೆ ಅಪರಾಧಿಯಾಗುತ್ತಾರೆ?


ಇಂತಹುದೇ ಆಕಸ್ಮಿಕ ಘಟನೆ ಡಾ. ಮನಮೋಹನಸಿಂಗ್ ಅವರ ಬದುಕಿನಲ್ಲಿ ಎರಡನೆಯ ಬಾರಿ ನಡೆಯುತ್ತದೆ. 2004ರಲ್ಲಿ ಯು.ಪಿ.ಎ. ಒಕ್ಕೂಟವು ಅಧಿಕಾರಕ್ಕೆ ಬರುತ್ತದೆ. ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಶ್ರೀಮತಿ ಸೋನಿಯಾ ಗಾಂಧಿ ಅವರು ಆಗ ರಾಜ್ಯಸಭೆಯ ವಿರೋಧಪಕ್ಷದ ನಾಯಕರಾಗಿದ್ದ ಡಾ. ಮನಮೋಹನಸಿಂಗ್ ಅವರನ್ನು ಪ್ರಧಾನಮಂತ್ರಿಯನ್ನಾಗಿ ಮಾಡುತ್ತಾರೆ.

2004 ಮೇ 22ರಂದು ಡಾ. ಮನಮೋಹನಸಿಂಗ್ ಅವರು ಭಾರತದ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಾರೆ. 2009ರಲ್ಲಿ ಮತ್ತೆ ಯುಪಿಎಗೆ ಬಹುಮತ ಬರುತ್ತದೆ. 2009 ಮೇ 22ರಂದು ಎರಡನೆಯ ಬಾರಿಗೆ ಡಾ. ಮನಮೋಹನಸಿಂಗ್ ಅವರು ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಾರೆ. ಇದಕ್ಕೆ ಮೊದಲು ಡಾ. ಮನಮೋಹನಸಿಂಗ್ ಅವರು ಎಂದೂ ಸಚಿವರಾಗಿ ಕಾರ್ಯನಿರ್ವಹಿಸಿದ್ದವರೂ ಅಲ್ಲ ಮತ್ತು ನೇರ ಚುನಾವಣೆಯನ್ನು ಎದುರಿಸಿದವರೂ ಅಲ್ಲ. 1991ರಿಂದ 2019ರವರೆಗೆ ಅವರು ಆರು ಸಲ ಅಂದರೆ 33ವರ್ಷಗಳ ಕಾಲ ರಾಜ್ಯಸಭಾ ಸದಸ್ಯರಾಗಿದ್ದುಕೊಂಡೇ ಕೇಂದ್ರ ಸರ್ಕಾರದಲ್ಲಿ ತಮ್ಮ ಎಲ್ಲ ಜವಾಬ್ದಾರಿಗಳನ್ನೂ ನಿರ್ವಹಿಸಿದರು.

ಡಾ. ಮನಮೋಹನ್‌ಸಿಂಗ್ ಅವರು ಪ್ರಧಾನಮಂತ್ರಿಯಾಗಿ ಹದಿನೆಂಟು ಘಂಟೆ ಕೆಲಸ ಮಾಡಿದರೂ ಅದಕ್ಕೆ ಪ್ರಚಾರ ತೆಗೆದುಕೊಳ್ಳಲು ಮುಂದಾಗಲಿಲ್ಲ. 2008ರಲ್ಲಿ ಇಡೀ ಜಗತ್ತು ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿ ಹೋಗಿತ್ತು. ಭಾರತವು ಮಾತ್ರ ಪ್ರಧಾನಿ ಡಾ. ಮನಮೋಹನಸಿಂಗ್ ಅದ್ಭುತ ನಿರ್ವಹಣೆಯಿಂದ ಅಷ್ಟೊಂದು ತಾಪಕ್ಕೆ ತುತ್ತಾಗಿರಲಿಲ್ಲ. 2009ರಲ್ಲಿ ದೇಶದ ಜಿ.ಡಿ.ಪಿ ಬೆಳವಣಿಗೆಯ ದರ ಶೇಕಡ 9ರಷ್ಟಿತ್ತು. ಅವರ ಸಾಮಾಜಿಕ ಕಾರ್ಯಕ್ರಮಗಳಿಂದಾಗಿ 250 ದಶಲಕ್ಷ ಜನರು ಬಡತನದ ರೇಖೆಯಿಂದ ಮೇಲೆ ಬಂದರು. ಅವರ ಅಧಿಕಾರಾವಧಿಯಲ್ಲಿ ಪೆಟ್ರೋಲ್ ಲೀಟರ್‌ಗೆ 60ರೂ ಮತ್ತು ಮನೆಯ ಗ್ಯಾಸ್ ಸಿಲಿಂಡರ್ ಬೆಲೆ 480ರೂ ಇದ್ದವು. 2014ರಲ್ಲಿ ಒಂದು ಡಾಲರ್‌ಗೆ 63ರೂಗಳಿತ್ತು.

2009ರಲ್ಲಿ ಮನಮೋಹನ್ ಸಿಂಗ್ ಅವರು ಅಮೆರಿಕಾದ ಜೊತೆ ಪರಮಾಣು ಒಪ್ಪಂದವನ್ನು ಮಾಡಿಕೊಳ್ಳುವುದನ್ನು ವಿರೋಧಿಸಿ ಅವರ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಮ್ಯುನಿಸ್ಟರು ಹಿಂದೆ ಪಡೆಯುತ್ತಾರೆ. ಆದರೂ ದೇಶದ ಹಿತದೃಷ್ಟಿಯಿಂದ ಮತ್ತು ಮುಂದೆ ಇಂಧನ ಸಮಸ್ಯೆ ಭಾರತಕ್ಕೆ ಬರಬಾರದೆಂಬ ಕಾರಣಗಳಿಂದ ತಮ್ಮ ಪ್ರಧಾನಮಂತ್ರಿ ಹುದ್ದೆಯನ್ನೇ ಪಣವನ್ನಾಗಿ ಇಟ್ಟು ಮನಮೋಹನಸಿಂಗ್ ಅಮೆರಿಕಾದ ಜೊತೆ ಪರಮಾಣು ಒಪ್ಪಂದವನ್ನು ಮಾಡಿಕೊಳ್ಳುತ್ತಾರೆ. ಇದೊಂದು ಐತಿಹಾಸಿಕ ಘಟನೆಯಾಗಿದೆ.

ಪ್ರಧಾನಮಂತ್ರಿಯಾಗಿ ಡಾ. ಮನಮೋಹನಸಿಂಗ್ ಅವರು ಮಾಡಿರುವ ಕೆಲಸದ ಮೌಲ್ಯಮಾಪನವು ಇದುವರೆಗೂ



ಸಮರ್ಪಕವಾಗಿ ನಡೆದಿಲ್ಲ. ಮಾಧ್ಯಮಗಳು ಮತ್ತು ಸಮಕಾಲೀನ ಇತಿಹಾಸಕಾರರು ಅವರಿಗೆ ನ್ಯಾಯ ದೊರಕಿಸಿ ಕೊಟ್ಟಿಲ್ಲ. "ಪ್ರಕೃತದಲ್ಲಿರುವುದಕ್ಕಿಂತ ಇತಿಹಾಸ ನನ್ನ ಬಗ್ಗೆ ಹೆಚ್ಚು ಕರುಣೆ ತೋರುತ್ತದೆ" ಎನ್ನುವ ಮಾತುಗಳಲ್ಲಿ ಅವರ ಹೃದಯದಲ್ಲಿ ಅಡಗಿದ್ದ ನೋವನ್ನು ಊಹಿಸಿಕೊಳ್ಳಬಹುದು.

ಅವರು ಪ್ರಧಾನಿಯಾಗಿ ಮಾಡಿದ ಒಂದೆರಡು ಪ್ರಮುಖ ಕೆಲಸಗಳನ್ನು ನಾವು ನೋಡಬಹುದು. ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ನ್ಯಾಯಮೂರ್ತಿ ಎಂ. ಎನ್. ವೆಂಕಟಾಚಲಯ್ಯ ಅವರು ಭಾರತದ ಸಂವಿಧಾನದ ಮೂಲ ಆಶಯಕ್ಕೆ ಅನುಗುಣವಾಗಿ ಡಾ. ಮನಮೋಹನಸಿಂಗ್ ಸರ್ಕಾರ ತಂದ ನಾಲ್ಕು ಪ್ರಮುಖ ಮಸೂದೆಗಳನ್ನು ಪ್ರಶಂಸೆ ಮಾಡುತ್ತಾರೆ. ಅವುಗಳೆಂದರೆ 'ಉದ್ಯೋಗದ ಹಕ್ಕು' 'ಮಾಹಿತಿ ಹಕ್ಕು' 'ಶಿಕ್ಷಣದ ಹಕ್ಕು' ಹಾಗೂ 'ಆಹಾರ ಭದ್ರತೆಯ ಹಕ್ಕು.' ಈ ನಾಲ್ಕು ಮಸೂದೆಗಳು ಎರಡೂ ಸದನಗಳಲ್ಲಿ ಅಂಗೀಕಾರ ಪಡೆದು ಅನುಷ್ಠಾನವಾಗುವುದರಲ್ಲಿ ಪ್ರಧಾನಿ ಡಾ. ಮನಮೋಹನಸಿಂಗ್ ಅವರ ಪಾತ್ರ ತುಂಬಾ ದೊಡ್ಡದು. ಆರು ದಶಕಗಳ ಭಾರತದ ಪ್ರಜಾಪ್ರಭುತ್ವ ಇತಿಹಾಸದಲ್ಲಿ ಇಂತಹ ಜನಪರ ಮಸೂದೆಗಳು ಬಂದಿರಲಿಲ್ಲವೆಂದು ಆಧುನಿಕ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.

ಡಾ. ಸಿಂಗ್ ಅವರು ಉದ್ಯೋಗದ ಹಕ್ಕಿನ ಅಂಗವಾಗಿ ಜಾರಿಗೆ ತಂದಿದ್ದ 'ನರೇಗಾ ಯೋಜನೆ' ಕರೋನ ಸಂದರ್ಭದಲ್ಲಿ ಭಾರತದ ಗ್ರಾಮೀಣ ಪ್ರದೇಶದ ಜನರ ಪಾಲಿಗೆ ಕಾಮಧೇನುವಾಯಿತು. ಲಕ್ಷಾಂತರ ಜನರು ಇದರಿಂದಾಗಿ ಅಂದು ತಮ್ಮ ಬದುಕನ್ನು ಉಳಿಸಿಕೊಂಡರು. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ತಂದ 'ಅನ್ನಭಾಗ್ಯ ಯೋಜನೆ' ಸಹ ಡಾ. ಮನಮೋಹನಸಿಂಗ್ ರೂಪಿಸಿದ ಆಹಾರ ಭದ್ರತಾ ಯೋಜನೆಯ ಒಂದು ರೂಪವೇ ಆಗಿದೆ.

2004ರ ತನಕ ಕೇಂದ್ರ ಸರ್ಕಾರದ ನೆರವಿನಿಂದ ನಡೆಯುತ್ತಿದ್ದ ಐ.ಐ.ಟಿ, ಐ.ಐ.ಎಂ. ಐ.ಐ.ಎಸ್‌ಸಿ. ಎ.ಐ.ಡಿ.ಎಂ.ಎಸ್‌ನಂತಹ ಸಂಸ್ಥೆಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ಸೌಲಭ್ಯವಿರಲಿಲ್ಲ. ಪ್ರಧಾನಿ ಮನಮೋಹನಸಿಂಗ್ ಅವರು ಇದಕ್ಕಾಗಿ ಡಾ. ವೀರಪ್ಪ ಮೊಯ್ಲಿ ಅಧ್ಯಕ್ಷತೆಯಲ್ಲಿ 'ಓವರ್ ಸೈಟ್ ಸಮಿತಿ'ಯನ್ನು ರೂಪಿಸಿ ಅದರ ಮೂಲಕ ಹಿಂದುಳಿದವರಿಗೆ ಮೀಸಲಾತಿ ಸೌಲಭ್ಯ ದೊರಕುವಂತೆ ಮಾಡಿದರು. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ಕನಸಿನ ಯೋಜನೆಯಾಗಿದ್ದ, ಕಲ್ಯಾಣ ಕರ್ನಾಟಕದ ಪ್ರಗತಿಗೆ ಪೂರಕವಾಗಿರುವ 371 (ಜೆ) ಸೌಲಭ್ಯ ಸಹ ಡಾ. ಮನಮೋಹನ್‌ಸಿಂಗ್ ಅವರ ಕಾಲದಲ್ಲಿಯೇ ದೊರೆತವು ಎನ್ನುವುದನ್ನು ಕನ್ನಡಿಗರು ಮರೆಯುವಂತಿಲ್ಲ.

ಪ್ರಧಾನಿ ಡಾ. ಮನಮೋಹನಸಿಂಗ್ ಅವರ ಕಾರ್ಯನಿರ್ವಹಣೆಯನ್ನು ಕುರಿತಂತೆ ಹಿರಿಯ ಐ.ಎ.ಎಸ್. ಅಧಿಕಾರಿ, ಕರ್ನಾಟಕ ಸರ್ಕಾರದ ಹಣಕಾಸು ಸಚಿವಾಲಯ ಮತ್ತು ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳಾಗಿರುವ ಮತ್ತು 2007ರಿಂದ 2012ರವರೆಗೆ ಪ್ರಧಾನಮಂತ್ರಿಗಳ ಕಚೇರಿಯಲ್ಲಿ ಸಹ-ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಣೆ ಮಾಡಿದ್ದ ಶ್ರೀ ಎಲ್.ಕೆ. ಅತೀಕ್ ಅವರು ತಮ್ಮ ಅನುಭವವನ್ನು ಹೀಗೆ ಬರೆದಿದ್ದಾರೆ: "ಪ್ರಧಾನಿ ಮನಮೋಹನಸಿಂಗ್ ಅವರು ಉನ್ನತ ಸ್ತರದ ಮೇಧಾವಿಗಳು, ವಿವಿಧ ವಿಚಾರಗಳಲ್ಲಿ ಪ್ರವೀಣರು. ದೊಡ್ಡ ವಿದ್ವಾಂಸರು. ಉತ್ತಮ ಸಂಭಾವಿತ ವ್ಯಕ್ತಿ. ಅವರೊಬ್ಬ ದಾರ್ಶನಿಕರು. ಬುದ್ಧಿಜೀವಿಗಳು. ಸಿಬ್ಬಂದಿಯ ಜೊತೆ ಮಾನವೀಯ ಸಂಬಂಧಗಳನ್ನಿಟ್ಟುಕೊಳ್ಳುತ್ತಿದ್ದರು. ಎಲ್ಲಾ ವಿಚಾರಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ಅನೇಕ ವಿಷಯಗಳ ಬಗ್ಗೆ ಅವರೇ ಸ್ವತ: ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಆ ವಿಚಾರದ ಬಗೆಗೆ ನಮಗೂ ಸಲಹೆ ನೀಡುತ್ತಿದ್ದರು. ಅವರೆಂದೂ ತಮ್ಮ ಸಿಬ್ಬಂದಿಗಳ ಮೇಲೆ ಅವಲಂಬಿತರಾದವರಲ್ಲ. ಅವರು ಭಾರತದ ರೈತರ 65ಸಾವಿರ ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡಿದ್ದರು"

ಪ್ರಧಾನಿ ಮನಮೋಹನಸಿಂಗ್ ಅವರನ್ನು ಮೆಚ್ಚದ, ಅವರ ಸಾಧನೆಗಳನ್ನು ಗುರುತಿಸಿದ ಒಂದು ವರ್ಗ ಅವರ ಕಾಲದಲ್ಲಿ ಕ್ರಿಯಾಶೀಲವಾಗಿತ್ತು. ಅವರ ಸಾವಿನ ಅನಂತರ ಮನಮೋಹನಸಿಂಗ್ ಅವರ ಕಾಲದ ಕೆಲವು ಪ್ರಕರಣಗಳನ್ನು ಮುಂದಿಟ್ಟುಕೊಂಡು ದೊಡ್ಡಮಟ್ಟದಲ್ಲಿ ಸುದ್ದಿಮಾಡಿದರು. ದೇಶದ ಆಡಿಟರ್ ಜನರಲ್ ಅವರು ಈ ಆಪಾದನೆಗಳಲ್ಲಿ ಹುರುಳಿಲ್ಲವೆಂದು ಹೇಳಿದ್ದರು.

ದೇಶದ ಯಾವುದೇ ರಾಜಕಾರಣಿಯಾಗಲೀ, ಮಾಧ್ಯಮವಾಗಲೀ ಡಾ. ಮನಮೋಹನಸಿಂಗ್ ಅವರನ್ನು ವೈಯಕ್ತಿಕವಾಗಿ ಭ್ರಷ್ಟರೆಂದು ಕರೆದಿಲ್ಲ. ಡಾ. ಮನಮೋಹನಸಿಂಗ್ ಅವರು ತಮ್ಮ ವಿದ್ವತ್ತಿನಿಂದಷ್ಟೇ ಅಲ್ಲದೇ ತಮ್ಮ ಪ್ರಾಮಾಣಿಕತೆಯಿಂದಲೂ ಖ್ಯಾತಿ ಪಡೆದಿದ್ದರು. ಅವರಂತೆಯೇ ಸರಳ ಜೀವನವನ್ನು ನಡೆಸುತ್ತಿರುವ ಅವರ ಮಗಳು ದಮನ್‌ಸಿಂಗ್ ಅವರು ಒಂದು ಸನ್ನಿವೇಶದಲ್ಲಿ ಹೀಗೆ ಹೇಳಿದ್ದಾರೆ: "ನಾವು ನಮ್ಮ ತಂದೆಯವರನ್ನು ಯಾವುದೇ ರೀತಿಯ ಸೌಲಭ್ಯ ಕೇಳಬಾರದು ಎನ್ನುವುದು ನಮ್ಮ ಸಂಸಾರದಲ್ಲಿ ನಾವು ಪಾಲಿಸಿಕೊಂಡು ಬಂದಿರುವ ನಿಯಮ".

ಪ್ರಧಾನಿ ಡಾ. ಮನಮೋಹನಸಿಂಗ್ ಅವರಿಗೆ ಆರೋಗ್ಯ ವಲಯಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಅತೃಪ್ತಿಯಿತ್ತು. ಆರೋಗ್ಯ ಕ್ಷೇತ್ರದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯಕ್ಕಾಗಿ ಅವರ ಸರ್ಕಾರ 'ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ' ಎನ್ನುವ ಹೊಸ ಯೋಜನೆಯನ್ನು ಪ್ರಾರಂಭಿಸಿತ್ತು. ಆದರೆ ಈ ಯೋಜನೆಯು ಅವರ ಆಶಯಕ್ಕೆ ಅನುಗುಣವಾದ ಮಟ್ಟದಲ್ಲಿ ಅನುಷ್ಠಾನಗೊಳ್ಳಲಿಲ್ಲ. ದೇಶದ ಮಾನವಸಂಪನ್ಮೂಲ ಅಭಿವೃದ್ಧಿಯಾಗಬೇಕಾದರೆ ಮಹಿಳೆ ಮತ್ತು ಮಕ್ಕಳ ಆರೋಗ್ಯದಲ್ಲಿ ಸಮಗ್ರ ಸುಧಾರಣೆಯಾಗಬೇಕು ಎನ್ನುವ ಪ್ರಬಲ ನಂಬಿಕೆ ಪ್ರಧಾನಿ ಡಾ ಮನಮೋಹನಸಿಂಗ್ ಅವರಲ್ಲಿತ್ತು.

ಭಾರತ ಸರ್ಕಾರ ಡಾ. ಮನಮೋಹನಸಿಂಗ್ ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಬೇರೆ ಬೇರೆ ಕಾರಣಗಳಿಗಾಗಿ ಸಮರ್ಥವಾಗಿ ಅವರ ಸಾಧನೆಯನ್ನು ಸಮರ್ಥವಾಗಿ ಜನರ ಮುಂದಿಡದ ಕಾರಣ ಬಹುಮಟ್ಟಿನ ಜನರಿಗೆ ಅವರ ಸಾಧನೆಯ ವಿಚಾರದಲ್ಲಿ ಮಾಹಿತಿ ದೊರೆಯಲಿಲ್ಲ. ಭಾರತೀಯರು ತಮ್ಮ ಪರಂಪರೆಗನುಗುಣವಾಗಿ 'ಸತ್ತ ಎಮ್ಮೆಗೆ ಎರಡು ಸೇರು ಹಾಲು' ಎನ್ನುವ ಗಾದೆ ಮಾತಿನಂತೆ ಡಾ. ಮನಮೋಹನಸಿಂಗ್ ನಿಧನದ ಅನಂತರ ಅವರ ವ್ಯಕ್ತಿತ್ವವನ್ನು ಪ್ರಶಂಸೆ ಮಾಡುತ್ತಿದ್ದಾರೆ.

ಕನ್ನಡದ ದಿನಪತ್ರಿಕೆಯೊಂದು ಡಾ. ಮನಮೋಹನಸಿಂಗ್ ಅವರ ವ್ಯಕ್ತಿತ್ವವನ್ನು ಹೀಗೆ ಸಮರ್ಥವಾಗಿ ಸೆರೆಹಿಡಿದಿದೆ: "ಜೀವನದಲ್ಲಿ ಅತ್ಯುನ್ನತ ಮೌಲ್ಯಗಳನ್ನು ಪಾಲಿಸಿದ ಡಾ. ಮನಮೋಹನಸಿಂಗ್ ದೇಶ ಕಂಡ ಮಹಾನ್ ಪ್ರಧಾನಿಗಳಲ್ಲಿ ಒಬ್ಬರು ಎಂಬ ಮಾತನ್ನು ಇತಿಹಾಸ ಹೇಳುತ್ತದೆ".

■ ನಿರೂಪಣೆ: ಶ್ರೀವತ್ಸ

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
ಅಂಬಿಕಾ ಎಂ. ಹುಲಿನಾಯ್ಕರ್

ಸಂಯೋಜಕ ಸಂಪಾದಕರು
ಎಂ.ಎಸ್.ಪಾಟೀಲ್

ಸಲಹಾ ಸಂಪಾದಕರು
ಎನ್.ಭಾರತಿ

ಸಂಪಾದಕ ಮಂಡಳಿ
ಡಾ. ಭವಾನಿ ಸ್ಟಾಲಿನ್
ಡಾ. ಮನೋನ್ಮಣಿ ಎಂ.ಎಚ್
ಡಾ. ಲಾವಣ್ಯ ರಮಣ

ಸಹಾಯಕ ಸಂಪಾದಕರು:
ಎನ್. ಆನಂದ

ಪುಟ ವಿನ್ಯಾಸ:
ಸುಮಾ ಸಾಗರ್

**ಸ್ಥಿರ ವೇಳಾಪಟ್ಟಿ ಮತ್ತು ನಿಗದಿತ ಪಠ್ಯಕ್ರಮವು ಶಿಸ್ತುಬದ್ಧ ಕಲಿಕೆಗೆ ಪೂರಕವಾಗಿರುತ್ತದೆ. ಇದು ಅವರು ಮುಂದೆ ತಮ್ಮ ವೃತ್ತಿಜೀವನದಲ್ಲಿ ಯಶಸ್ಸನ್ನು ಪಡೆಯುವಲ್ಲಿ ಬಹಳಷ್ಟು ನೆರವಾಗುತ್ತದೆ. ಇತಿಹಾಸದುದ್ದಕ್ಕೂ, ಈ ವಿಧಾನವು ಕಲಿಕೆಯ ಅತ್ಯಂತ ಪರಿಣಾಮಕಾರಿ ಮಾರ್ಗವೆಂದು ಸಾಬೀತಾಗಿದೆ.**

# ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಶಿಕ್ಷಕರು ಮತ್ತು ಸಾಂಪ್ರದಾಯಿಕ ಶಾಲೆಗಳ ಪಾತ್ರ

ಮನದ ಮಾತು



ಡಾ. ರಮಣ ಎಂ ಹುಲಿನಾಯ್ಕರ್
ಕಾರ್ಯನಿರ್ವಾಹಕ ಸಂಪಾದಕರು
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು

ಒಂದು ದಿನ ಏಳುವರ್ಷದ ನನ್ನ ಮಗ ನನ್ನನ್ನು ಕೇಳಿದ ಪ್ರಶ್ನೆ "ಅಪ್ಪಾ, ರಷ್ಯಾ ಅಲಾಸ್ಕಾವನ್ನು ಏಕೆ ಅಮೇರಿಕಾಕ್ಕೆ ಬಿಟ್ಟುಕೊಟ್ಟಿತು?", ಈ ಪ್ರಶ್ನೆಯು 7 ವರ್ಷದ ಮಗುವಿನಿಂದ ಬಂದ ಕಾರಣ ನಾನು ಆ ಕ್ಷಣದಲ್ಲಿ ಆಶ್ಚರ್ಯಚಕಿತನಾದೆ. ಇಂತಹ ವ್ಯಾಪಕ ಮಾಹಿತಿ ಇಂದಿನ ದಿನಗಳಲ್ಲಿ ಮಕ್ಕಳಿಗೂ ಲಭ್ಯವಿದೆ ಎಂಬುದು ನನಗೆ ಆಶ್ಚರ್ಯವನ್ನುಂಟುಮಾಡಿತು. ಅವನ ಪ್ರಶ್ನೆಗೆ ಉತ್ತರ ನನಗೆ ಗೊತ್ತಿರಲಿಲ್ಲ. ನಾನು ಅಂತರ್ಜಾಲದಲ್ಲಿ ಹುಡುಕಾಡಿ ಸೂಕ್ತ ಮಾಹಿತಿಯನ್ನು ಪಡೆದು ಮಗನಿಗೆ ಉತ್ತರ ನೀಡಿದೆ.

ವಿವಿಧ ಬಗೆಯ ಮಾಹಿತಿಗಳು ದಿನದಿಂದ ದಿನಕ್ಕೆ ಉಚಿತವಾಗಿ ಮತ್ತು ಹೆಚ್ಚು ಸುಲಭವಾಗಿ ಜನರಿಗೆ ತಲುಪುತ್ತಿರುವ ಈ ಯುಗದಲ್ಲಿ, ಸಾಂಪ್ರದಾಯಿಕ ಶಾಲೆಗಳ ಮತ್ತು ತರಗತಿಯ ಶಿಕ್ಷಣದ ಭವಿಷ್ಯ ಏನಾಗಬಹುದು ಮತ್ತು ಇನ್ನು ಮುಂದೆ ಶಿಕ್ಷಣದಲ್ಲಿ ಶಿಕ್ಷಕರ ಪಾತ್ರವಿದೆಯೇ ಎಂಬ ಯೋಚನೆ ನನ್ನನ್ನು ಕಾಡತೊಡಗಿತು.

ಇದನ್ನು ತಿಳಿಯಲು ಮೊದಲು ನಾವು ಆನ್‌ಲೈನ್ ಕಲಿಕೆ ಮತ್ತು ಸಾಂಪ್ರದಾಯಿಕ ಕಲಿಕೆಗಳ ಅನುಕೂಲಗಳು ಮತ್ತು ಅನನುಕೂಲಗಳನ್ನು ಅರ್ಥಮಾಡಿಕೊಳ್ಳಬೇಕು.



### ಆನ್‌ಲೈನ್ ಕಲಿಕೆ:

**ಆನ್‌ಲೈನ್ ಕಲಿಕೆಯು ಹಲವಾರು ಉತ್ತಮ ಅಂಶಗಳನ್ನು ಹೊಂದಿದೆ. ಅವುಗಳೆಂದರೆ :**

- **ಕಡಮೆ ವೆಚ್ಚ:** ವಿದ್ಯಾರ್ಥಿಗಳು ಕೋರ್ಸ್ ಶುಲ್ಕಗಳು, ಪ್ರಯಾಣ, ಆಹಾರ, ಪುಸ್ತಕಗಳ ಮೇಲಿನ ವೆಚ್ಚ, ಕ್ಯಾಂಪಸ್‌ನಲ್ಲಿ ಇರುವ ವೆಚ್ಚ ಅಥವಾ ಹೊರಗಿನ ಹಾಸ್ಟೆಲ್‌ಗಳ ವೆಚ್ಚಗಳಲ್ಲಿ ಗಮನಾರ್ಹವಾಗಿ ಉಳಿಸಬಹುದು.
- **ಸಂದರ್ಭಕ್ಕೆ ಹೊಂದಿಕೊಳ್ಳುವಿಕೆ:** ವಿದ್ಯಾರ್ಥಿಗಳು ತಮ್ಮ ಆಸಕ್ತಿಗಳು ಮತ್ತು ಅವರ ಭವಿಷ್ಯದ ಗುರಿಗಳಿಗೆ ಅನುಗುಣವಾಗಿ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು, ವಿದ್ಯಾರ್ಥಿಗಳು ಯಾವುದೇ ಸ್ಥಳದಲ್ಲಿ ಇದ್ದರೂ ತಮಗೆ ಅಗತ್ಯವಾದ ಕೋರ್ಸನ್ನು ತೆಗೆದುಕೊಳ್ಳಬಹುದು ಮತ್ತು ತಮ್ಮ ಬಿಡುವಿನ ಸಮಯದಲ್ಲಿ ಅಧ್ಯಯನ ಮಾಡಬಹುದು. ಉದ್ಯೋಗದಲ್ಲಿರುವ ವ್ಯಕ್ತಿಗಳು ಸಹ ಸ್ವಲ್ಪ ಬಿಡುವು ಮಾಡಿಕೊಂಡು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು.
- **ಕಲಿಕೆಯ ವೇಗ:** ವಿದ್ಯಾರ್ಥಿಗಳು ತಮಗೆ ಸಾಧ್ಯವಾಗುವ ಕಲಿಕೆಯ ವೇಗಕ್ಕೆ ಅನುಗುಣವಾಗಿ ಅಧ್ಯಯನ ಮಾಡಬಹುದು. ಅವರು ತಮ್ಮ ಬಿಡುವಿನ ಸಮಯವನ್ನು ಅಧ್ಯಯನಕ್ಕಾಗಿ ಬಳಸಿಕೊಳ್ಳಬಹುದು. ಇದರಿಂದ ಅವರು ತಮ್ಮ ಸಮಯದ ಸದುಪಯೋಗವನ್ನು ಮಾಡಿಕೊಳ್ಳಬಹುದು. ಪರಿಣಾಮವಾಗಿ, ವಿದ್ಯಾರ್ಥಿಗಳು ಉಳಿದ ಸಮಯವನ್ನು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಂತಹ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಇದರಿಂದ ಅನುಕೂಲವಾಗುತ್ತದೆ.
- ವೀಡಿಯೊಗಳು, ಆಡಿಯೊಗಳು, ಗೇಮ್‌ಗಳು, ಆನ್‌ಲೈನ್ ರಸಪ್ರಶ್ನೆ, ಕಾರ್ಯಯೋಜನೆಗಳಂತಹ ಕಲಿಕೆಯ ಪ್ಲಾಟ್‌ಫಾರ್ಮ್‌ಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವುದರಿಂದ, ಅವರ ಕಲಿಕೆಯು ಹೆಚ್ಚು ಸುಲಭ ಮತ್ತು ಆಸಕ್ತಿದಾಯಕವಾಗಿರುತ್ತದೆ.

**ಆದರೆ, ಆನ್‌ಲೈನ್ ಕಲಿಕೆಯು ಕೆಲವು ಅನನುಕೂಲಗಳನ್ನು ಹಾಗೂ ಮಿತಿಗಳನ್ನು ಸಹ ಹೊಂದಿದೆ. ಅವುಗಳಲ್ಲಿ ಕೆಲವು ಹೀಗಿವೆ:**

- ವಿವಿಧ ಸರ್ಚ್ ಇಂಜಿನ್‌ಗಳನ್ನು ಬಳಸಿಕೊಂಡು ಹುಡುಕುವ ಮೂಲಕ ಜ್ಞಾನವನ್ನು ಪಡೆಯಬಹುದಾದರೂ ಮತ್ತು ಓದಬೇಕಾದ ಪುಸ್ತಕಗಳ ಸಂಖ್ಯೆಯನ್ನು ಕಡಿಮೆಗೊಳಿಸಿಕೊಳ್ಳಬಹುದಾದರೂ, ಮಾಹಿತಿಯ ಹೊರೆ ವಿದ್ಯಾರ್ಥಿಗಳ ಮೇಲೆ ವಿಪರೀತವಾಗುತ್ತದೆ. ಅವರಲ್ಲಿ ವಿಚಕ್ಷಣತೆಯಿಲ್ಲದಿದ್ದರೆ ಮತ್ತು ಅವರಿಗೆ ಸರಿಯಾದ ಮಾರ್ಗದರ್ಶನ ದೊರೆಯದಿದ್ದರೆ ಅಗತ್ಯವಾದ ಮಾಹಿತಿಗಳನ್ನು ಆಯ್ಕೆಮಾಡುವಲ್ಲಿ ಅವರು ಬಹಳ ಕಷ್ಟಪಡಬೇಕಾಗುತ್ತದೆ.
- ನಿರಂತರವಾಗಿ ಅಧ್ಯಯನ ಮಾಡಲು ಸ್ವಪ್ರೇರಣೆ ಮತ್ತು ಆಸಕ್ತಿಯ ಅಗತ್ಯವಿರುತ್ತದೆ. ಆದ್ದರಿಂದ, ಇದು ವಿದ್ಯಾರ್ಥಿಗಳಲ್ಲಿ ಕಠಿಣತಮವಾದ ಸ್ವಯಂ–ಶಿಸ್ತನ್ನು ಬಯಸುತ್ತದೆ. ಇಲ್ಲದಿದ್ದರೆ, ಸ್ವಾಭಾವಿಕವಾದ ಆಲಸ್ಯವು ಅವರ ಅಧ್ಯಯನದ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ.
- ಆನ್‌ಲೈನ್ ಕಲಿಕೆಗೆ ವೇಗದ ಇಂಟರ್ನೆಟ್ ಸೇವೆ, ಉತ್ತಮ ಕಂಪ್ಯೂಟರ್ ಮತ್ತು ಇ–ಲರ್ನಿಂಗ್ ಪ್ಲಾಟ್‌ಫಾರ್ಮ್‌ನಂತಹ ಉತ್ತಮ ಮೂಲಸೌಕರ್ಯಗಳ ಅಗತ್ಯವಿರುತ್ತದೆ.
- ವಿದ್ಯಾರ್ಥಿಗಳು ನೇರವಾಗಿ ಅಧ್ಯಾಪಕರೊಂದಿಗೆ ಸಂವಹನ ನಡೆಸುವುದಿಲ್ಲವಾದುದರಿಂದ ಅವರಿಗೆ ದ್ವಿಮುಖ ಸಂವಹನಕ್ಕೆ ಅವಕಾಶವಿರುವುದಿಲ್ಲ. ಇದರಿಂದ ಆನ್‌ಲೈನ್ ಬೋಧಕರಿಂದ ಯಾವುದೇ ಸ್ಪಷ್ಟೀಕರಣವನ್ನು ಸುಲಭವಾಗಿ ಪಡೆಯುವುದು ಅವರಿಗೆ ಕಷ್ಟವಾಗುತ್ತದೆ.
- ಅಲ್ಲದೆ, ಇತರ ವಿದ್ಯಾರ್ಥಿಗಳೊಡನೆ ವ್ಯಕ್ತಿಗತವಾಗಿ ಚರ್ಚೆಗಳನ್ನು ನಡೆಸಲು ಅವರಿಗೆ ಅವಕಾಶವಿರುವುದಿಲ್ಲ ಮತ್ತು ತಮ್ಮಲ್ಲಿ ಪರಿಣಾಮಕಾರಿ ಸಂವಹನ ಕಲೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು, ಸಹ–ವಿದ್ಯಾರ್ಥಿಗಳೊಡನೆ ಮತ್ತು ಸಮಾಜದೊಂದಿಗೆ ಸಂಪರ್ಕಗಳನ್ನು ಬೆಳೆಸಿಕೊಳ್ಳುವುದು ಕಠಿಣವಾಗುತ್ತದೆ.

### ಸಾಂಪ್ರದಾಯಿಕ ಕಲಿಕೆ:

**ಸಾಂಪ್ರದಾಯಿಕ ಕಲಿಕೆಯ ಪ್ರಯೋಜನಗಳು ಹೀಗಿವೆ:**

- ಉದ್ಯೋಗದಲ್ಲಿಲ್ಲದ ಯುವ ಜನಾಂಗಕ್ಕೆ ಸಾಂಪ್ರದಾಯಿಕ ತರಗತಿಗಳು ಹೆಚ್ಚು ಸೂಕ್ತವಾಗಿರುತ್ತವೆ. ಅವರು ತರಗತಿಗಳಿಗೆ ನಿಯಮಿತವಾಗಿ ಹಾಜರಾಗಿರಬೇಕಾಗಿರುವುದರಿಂದ ಈ ವ್ಯವಸ್ಥೆಯು ಅವರಲ್ಲಿ ಶಿಸ್ತನ್ನು ಮೂಡಿಸಲು ಸಹಾಯಮಾಡುತ್ತದೆ. ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಸಾಮರ್ಥ್ಯ ಮತ್ತು ದೌರ್ಬಲ್ಯವನ್ನು ಸುಲಭವಾಗಿ ಮೌಲ್ಯಮಾಪನ ಮಾಡಬಹುದು ಮತ್ತು ತಮ್ಮ ಭವಿಷ್ಯದ ವೃತ್ತಿಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಅವರಿಗೆ ಮಾರ್ಗದರ್ಶನ ನೀಡಬಹುದು.
- ತಮ್ಮ ಶಿಕ್ಷಕರೊಂದಿಗೆ ಲೈವ್ ಆಗಿ ಸಂವಹನ ಮಾಡುವುದು ಮತ್ತು ಅವರೊಡನೆ ದ್ವಿಮುಖ ಸಂವಹನವನ್ನು ನಡೆಸುವುದು ನಿಸ್ಸಂದೇಹವಾಗಿ ಜ್ಞಾನಾರ್ಜನೆಯ ಉತ್ತಮ ಮಾರ್ಗವಾಗಿದೆ. ಇದು ಇತರ ವಿದ್ಯಾರ್ಥಿಗಳೊಂದಿಗೆ ವೈಯಕ್ತಿಕ ಸಂವಹನವನ್ನು ಮತ್ತು ತಂಡದಲ್ಲಿ ಕೆಲಸಮಾಡುವ ಕೌಶಲವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶಗಳನ್ನೂ ಒದಗಿಸುತ್ತದೆ. ಸಾಂಪ್ರದಾಯಿಕ ತರಗತಿಯ ವಿದ್ಯಾರ್ಥಿಗಳು ಸಮಾಜದ ಜೊತೆ ನಿಕಟವಾದ ಸಂಪರ್ಕವನ್ನಿಟ್ಟುಕೊಂಡಿರುತ್ತಾರೆ. ಈ ಕಾರಣದಿಂದಾಗಿ ಜೀವನದ ನೈಜ ಅನುಭವವನ್ನು ಪಡೆಯಲು ಅವರಿಗೆ ಅವಕಾಶವಿರುತ್ತದೆ.
- ಸ್ಥಿರ ವೇಳಾಪಟ್ಟಿ ಮತ್ತು ನಿಗದಿತ ಪಠ್ಯಕ್ರಮವು ಶಿಸ್ತುಬದ್ಧ ಕಲಿಕೆಗೆ ಪೂರಕವಾಗಿರುತ್ತದೆ. ಇದು ಅವರು ಮುಂದೆ ತಮ್ಮ ವೃತ್ತಿಜೀವನದಲ್ಲಿ ಯಶಸ್ಸನ್ನು ಪಡೆಯುವಲ್ಲಿ ಬಹಳಷ್ಟು ನೆರವಾಗುತ್ತದೆ. ಇತಿಹಾಸದುದ್ದಕ್ಕೂ, ಈ ವಿಧಾನವು ಕಲಿಕೆಯ ಅತ್ಯಂತ ಪರಿಣಾಮಕಾರಿ ಮಾರ್ಗವೆಂದು ಸಾಬೀತಾಗಿದೆ.
- ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವಿನ ನಿರಂತರ ಸಂವಾದವು ಪರೀಕ್ಷೆಗಳ ಬಗೆಗೆ ವಿದ್ಯಾರ್ಥಿಗಳ ಭಯವನ್ನು ಹೋಗಲಾಡಿಸಲು, ಅವರ ಮನಸ್ಸಿನಲ್ಲಿರುವ ಹಿಂಜರಿಕೆ ಮತ್ತು ಅಳುಕನ್ನು ಹೋಗಲಾಡಿಸಲು ಸಹಾಯಮಾಡುತ್ತದೆ. ಇದು ವಿದ್ಯಾರ್ಥಿಗಳನ್ನು ಉನ್ನತ ಸಾಧನೆ ಮಾಡಲು ಪ್ರೇರೇಪಿಸುತ್ತದೆ.

**ಈ ಕಲಿಕೆಯ ವಿಧಾನದಲ್ಲಿ ವಿದ್ಯಾರ್ಥಿಗಳು ಎದುರಿಸುವ ಕೆಲವು ಅನನುಕೂಲಗಳು ಹೀಗಿವೆ:–**

- ಈ ವಿಧಾನದಲ್ಲಿ ಕಲಿಕೆಯು ದುಬಾರಿಯಾಗಿರುತ್ತದೆ ಮತ್ತು ಕೋರ್ಸ್ ಆಯ್ಕೆಗಳಲ್ಲಿ ಹೆಚ್ಚು ಅವಕಾಶಗಳಿರುವುದಿಲ್ಲ.

▶▶ 4ನೇ ಪುಟಕ್ಕೆ...

## ಡಾ.ಎಂ.ಆರ್.ಹುಲಿನಾಯ್ಕರ್ @78

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಸ್ಥಾಪಕರೂ, ಖ್ಯಾತ ಸರ್ಜನ್ ಮತ್ತು ಮಾಜಿ ವಿಧಾನಪರಿಷತ್ತಿನ ಸದಸ್ಯರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರ 78ನೆಯ ಜನ್ಮದಿನ ಜನವರಿ 16ರಂದು, ಡಾ.ಹುಲಿನಾಯ್ಕರ್ ಅವರ ಆತ್ಮಕಥನದ ಇಂಗ್ಲಿಷ್ ಆವೃತ್ತಿ `Reminiscenced and Reflections' ಅನ್ನು ಅದರ ಅನುವಾದಕರಾದ ವಿ.ಕೃಷ್ಣ ಅವರು ಡಾ.ಹುಲಿನಾಯ್ಕರ್ ಅವರಿಗೆ ಮೊದಲ ಪ್ರತಿ ಅರ್ಪಿಸಿದರು. ಜೊತೆಗೆ ತಾವು ಸಂಪಾದಕರಾಗಿರುವ, ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಪ್ರಧಾನ ಸಂಪಾದಕರಾಗಿರುವ, ಕರ್ನಾಟಕ ಸರ್ಕಾರ ಇತ್ತೀಚಿಗೆ ಹೊರತಂದಿರುವ ಕುಮಾರವ್ಯಾಸ ಭಾರತ ಪ್ರತಿಗಳನ್ನು ಶುಭಾಶಯಗಳೊಡನೆ ಡಾ.ಹುಲಿನಾಯ್ಕರ್ ದಂಪತಿಗಳಿಗೆ ನೀಡಿದರು.

ಚಿತ್ರದಲ್ಲಿ ಬಲಗಡೆಯಿಂದ ವಿ.ಕೃಷ್ಣ, ಡಾ.ರಮಣ ಹುಲಿನಾಯ್ಕರ್, ಈಶನ್‌ಆರ್.ಹುಲಿನಾಯ್ಕರ್, ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀಮತಿಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ.ಲಾವಣ್ಯ ರಮಣ, ಯುವನ್ ಆರ್.ಹುಲಿನಾಯ್ಕರ್, ಶ್ರೀಮತಿ ಎನ್.ಭಾರತಿ ಮತ್ತು ಡಾ.ಕೆ.ಆರ್.ಕಮಲೇಶ್.



# ಇನ್ಸೈಟ್ಸ್ ಐಎಎಸ್ ಹಾಗೂ ಶ್ರೀದೇವಿ ಇಂಜನೀಯರಿಂಗ್ ಕಾಲೇಜು ಶೈಕ್ಷಣಿಕ ಒಡಂಬಡಿಕೆ



ಬೆಂಗಳೂರಿನ ಪ್ರತಿಷ್ಠಿತ ಇನ್ಸೈಟ್ಸ್ ಐಎಎಸ್ ಹಾಗೂ ತುಮಕೂರಿನ ಶ್ರೀದೇವಿ ಇಂಜನಿಯರಿಂಗ್ ಕಾಲೇಜು ಶೈಕ್ಷಣಿಕ ಒಡಂಬಡಿಕೆಯ ತಿಳುವಳಿಕೆಯ ಪತ್ರಕ್ಕೆ ದಿನಾಂಕ 08.01.2025ರಂದು ಸಹಿ ಹಾಕಿದವು.

ಇನ್ಸೈಟ್ಸ್ ಐಎಎಸ್ ಅಕಾಡೆಮಿಯ ಅಧ್ಯಕ್ಷರಾಗಿರುವ ಜಿ.ಬಿ. ವಿನಯಕುಮಾರ ಹಾಗೂ ಶ್ರೀದೇವಿ ಇಂಜನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾಗಿರುವ ಡಾ. ನರೇಂದ್ರ ವಿಶ್ವನಾಥ ಅವರು ಶೈಕ್ಷಣಿಕ ಒಡಂಬಡಿಕೆಯ ಪತ್ರಕ್ಕೆ ಸಹಿ ಹಾಕಿದರು. ಶ್ರೀದೇವಿ ಇಂಜನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಐಎಎಸ್ ಪೂರ್ವಸಿದ್ಧತಾ ತರಬೇತಿ, ಉದ್ಯೋಗ ಮಾರ್ಗದರ್ಶನ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಸಿದ್ದತೆಯ ಕಾರ್ಯಾಗಾರಗಳನ್ನು ಏರ್ಪಡಿಸುವುದು ಇದರ ಮೂಲಉದ್ದೇಶವಾಗಿದೆ. ಜಿ.ಬಿ. ವಿನಯಕುಮಾರ ಮಾತನಾಡಿ, "ಇಂಜನಿಯರಿಂಗ್ ಕಾಲೇಜುಗಳ ಪೈಕಿ ಶೈಕ್ಷಣಿಕ ಒಪ್ಪಂದಮಾಡಿಕೊಂಡ ಮೊದಲನೆಯ ಕಾಲೇಜು ಶ್ರೀದೇವಿ ಇಂಜನಿಯರಿಂಗ್ ಕಾಲೇಜು. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ದರಾಗಲು ತರಬೇತಿಯನ್ನು ನೀಡುತ್ತೇವೆ. ಈಗಾಗಲೇ ಸಂಸ್ಥೆಯಿಂದ 1500ಕ್ಕೂ ಹೆಚ್ಚು ಅಭ್ಯರ್ಥಿಗಳು ನಮ್ಮ ಸಂಸ್ಥೆಯಿಂದ ಐ.ಎ.ಎಸ್ ಪರೀಕ್ಷೆಯಲ್ಲಿ ಉದ್ತೀರ್ಣರಾಗಿ ದೇಶಾದ್ಯಂತ ಆಯಕಟ್ಟಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ದೇಶದ ವಿವಿಧೆಡೆ ಇನ್ಸೈಟ್ಸ್ ಐಎಎಸ್ ಶಾಖೆಗಳಿವೆ" ಎಂದರು.

ಡಾ. ನರೇಂದ್ರ ವಿಶ್ವನಾಥ ಅವರು ಮಾತನಾಡಿ "ನಮ್ಮ ಕಾಲೇಜು ಇನ್ಸೈಟ್ಸ್ ಐ.ಎ.ಎಸ್ ಅಕಾಡೆಮಿ ಜೊತೆಗೆ ಮಾಡಿಕೊಂಡಿರುವ ಶೈಕ್ಷಣಿಕ ಒಡಂಬಡಿಕೆಯಿಂದಾಗಿ ನಮ್ಮ ವಿದ್ಯಾರ್ಥಿಗಳಿಗೆ ಐ.ಎ.ಎಸ್ ಪರೀಕ್ಷೆಗೆ ಸಿದ್ಧರಾಗಲು ಉತ್ತಮ ತರಬೇತಿ ದೊರೆಯುವುದು" ಎಂದರು.

ಐಕ್ಯೂಎಸಿ ಸಂಯೋಜಕರಾದ ಡಾ. ಪ್ರತಾಪ, ಇಂಡಸ್ಟ್ರಿ ಇನ್ಸಿಟ್ಯೂಟ್ ಇಂಟರ್ ಆಕ್ಷನ್ ಘಟಕದ ನಿರ್ದೇಶಕರಾದ ಡಾ. ಎಚ್.ಕೆ. ಭಾರ್ಗವ ಹಾಗೂ ಇನ್ಸೈಟ್ಸ್ ಐಎಎಸ್ ಸಿಬ್ಬಂದಿ ಈ ಸಂದರ್ಭದಲ್ಲಿ ಉಪಸ್ಥಿತರಾಗಿದ್ದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿಯಾದ ಅಂಬಿಕಾ ಎಂ. ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರು ಹಾಗೂ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿಯಾದ ಡಾ. ಲಾವಣ್ಯ ರಮಣ್ ಅವರು ಶುಭಹಾರೈಸಿದರು.

▪ **ವರದಿ: ಡಾ. ಎಚ್. ಕೆ .ಭಾರ್ಗವ**

# ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಶಿಕ್ಷಕರು ಮತ್ತು ಸಾಂಪ್ರದಾಯಿಕ ಶಾಲೆಗಳ ಪಾತ್ರ




▶▶ ಮೂರನೇ ಪುಟದಿಂದ

- ಹೊಂದಾಣಿಕೆಯಲ್ಲಿನ ಕೊರತೆ: ಸಾಂಪ್ರದಾಯಿಕ ತರಗತಿಯ ಕಲಿಕೆಯು ನಿಗದಿತವಾದ ಪಠ್ಯಕ್ರಮವನ್ನು ಮಾತ್ರ ಅನುಸರಿಸುತ್ತದೆ. ಇದು ವಿಷಯಗಳನ್ನು ಆಳವಾಗಿ ಅನ್ವೇಷಿಸುವ ವಿದ್ಯಾರ್ಥಿಯ ವೈಯಕ್ತಿಕ ಸಾಮರ್ಥ್ಯವನ್ನು ಮಿತಿಗೊಳಿಸಬಹುದು. ಈ ವ್ಯವಸ್ಥೆಯು ಅನೇಕ ಸಂದರ್ಭಗಳಲ್ಲಿ ವಿದ್ಯಾರ್ಥಿಯ ವೈಯಕ್ತಿಕ ಒಲವು ಮತ್ತು ಕಲಿಯುವ ಸಾಮರ್ಥ್ಯವನ್ನು ಗುರುತಿಸುವುದಿಲ್ಲ. ಸಮಯದ ವಿಷಯದಲ್ಲಿರುವ ನಿರ್ಬಂಧಗಳು ವಿದ್ಯಾರ್ಥಿಯ ಅನುಕೂಲಕ್ಕೆ ತಕ್ಕಂತೆ ಇರದಿರಬಹುದು.
- ಸ್ವಾವಲಂಬನೆಯನ್ನು ಅಭಿವೃದ್ಧಿಪಡಿಸಿ ಕೊಳ್ಳುವ ಮತ್ತು ಸ್ವಂತವಾಗಿ ಏನನ್ನಾದರೂ ಸಾಧಿಸುವ ಪ್ರವೃತ್ತಿಯನ್ನು ಬೆಳಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶಗಳ ಕೊರತೆ ಈ ವಿಧಾನದಲ್ಲಿರುತ್ತದೆ.

**ಹಾಗಾದರೆ, ನಮ್ಮ ಪ್ರಸ್ತುತ ಸಾಂಪ್ರದಾಯಿಕ ಶಾಲಾ ವ್ಯವಸ್ಥೆಯ ಭವಿಷ್ಯ ಹೇಗಿರಬೇಕು?**

- ಶಿಕ್ಷಣದ ಭವಿಷ್ಯವು ಹೈಬ್ರಿಡ್ ಮಾದರಿಯಲ್ಲಿರಬೇಕು. ಅಂದರೆ, ಅದು ಆನ್‌ಲೈನ್ ಮತ್ತು ಸಾಂಪ್ರದಾಯಿಕ ಕಲಿಕೆ – ಎರಡೂ ವಿಧಾನಗಳ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ಸಂಯೋಜಿತ ಕಲಿಕೆಯ ಪರಿಸರಗಳು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ನಮ್ಯತೆ ಮತ್ತು ಸ್ವಂತಿಕೆಯನ್ನು ಬೆಳಸಿಕೊಳ್ಳಲು ಅವಕಾಶಗಳನ್ನು ಒದಗಿಸಬೇಕು ಮತ್ತು ಸಾಮಾಜಿಕ ಮತ್ತು ಸಂಯೋಜಿತ ವಿದ್ಯಾಭ್ಯಾಸದ ಪ್ರಯೋಜನಗಳನ್ನು ನಿರ್ವಹಿಸಬೇಕು. ಈ ವಿಧಾನವು ಶಿಕ್ಷಣದ ಸಮಗ್ರವಾದ ಮತ್ತು ಹೆಚ್ಚು ಪರಿಣಾಮಕಾರಿಯಾದ ಲಾಭವನ್ನು ಇಂದಿನ ವಿದ್ಯಾರ್ಥಿಗಳಿಗೆ ಒದಗಿಸುತ್ತದೆ.

**ಹಾಗಾದರೆ, ಈಗಿನ ಸಂಧಿಕಾಲದಲ್ಲಿ ಶಿಕ್ಷಕರ ಪಾತ್ರವೇನು?**

ಅಂತರ್ಜಾಲದಿಂದ ಜ್ಞಾನವನ್ನು ಮುಕ್ತವಾಗಿ ಸಂಪಾದಿಸಬಹುದಾದ ಈ ಕಾಲದಲ್ಲಿ ಶಿಕ್ಷಕರ ಪಾತ್ರ ಮತ್ತು ಜವಾಬ್ದಾರಿಗಳು ಕಡಿಮೆಯಾಗುವುದಿಲ್ಲ, ಬದಲಿಗೆ ಅವು ಇನ್ನೂ ಹೆಚ್ಚು ಪ್ರಾಮುಖ್ಯವನ್ನು ಹೊಂದಿವೆ. ಮಾಹಿತಿಯ ಪ್ರವಾಹವೇ ಹರಿದುಬರುತ್ತಿರುವ ಈ ಸಮಯದಲ್ಲಿ, ಹಲವಾರು ಪ್ರಮುಖ ಕ್ಷೇತ್ರಗಳಲ್ಲಿ ಶಿಕ್ಷಕರ ಪಾತ್ರವು ಹೆಚ್ಚು ನಿರ್ಣಾಯಕವಾಗಿದೆ. ಆದುದರಿಂದ ಅವರು ಬದಲಾಗುತ್ತಿರುವ ಪರಿಸ್ಥಿತಿಗೆ ತಕ್ಕಂತೆ ಹೀಗೆ ಬದಲಾಗಬೇಕು:

**1. ವಿದ್ಯಾರ್ಥಿಗಳ ಕಲಿಕೆಗೆ ಸಹಾಯಕರಾಗಬೇಕು:**

- **ಮಾರ್ಗದರ್ಶನ:** ಆನ್‌ಲೈನ್‌ನಲ್ಲಿ ಲಭ್ಯವಿರುವ ಅಪಾರ ಪ್ರಮಾಣದ ಮಾಹಿತಿಯಲ್ಲಿ ಅಗತ್ಯವಾದುದನ್ನು ಆಯ್ದುಕೊಳ್ಳಲು ವಿದ್ಯಾರ್ಥಿಗಳಿಗೆ ಶಿಕ್ಷಕರು ಸಹಾಯ ಮಾಡಬೇಕು. ವಿಶ್ವಾಸಾರ್ಹವಲ್ಲದ ಮೂಲಗಳನ್ನು ಬಿಟ್ಟು ನಂಬಲರ್ಹವಾದ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸುವುದನ್ನು ಅವರಿಗೆ ಕಲಿಸಬೇಕು.
- **ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಬೇಕು:** ಶಿಕ್ಷಕರು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ವಿಶ್ಲೇಷಣಾತ್ಮಕ ಕೌಶಲಗಳನ್ನು ಬೆಳೆಸಬೇಕು.

**2. ಜ್ಞಾನಾರ್ಜನೆಯ ಮೇಲ್ವಿಚಾರಕರಾಗಬೇಕು:**

- **ವಿಷಯಗಳ ಆಯ್ಕೆ:** ಶಿಕ್ಷಕರು ಪಠ್ಯಕ್ರಮ ಮತ್ತು ಕಲಿಕೆಯ ಉದ್ದೇಶಗಳೊಂದಿಗೆ ಹೊಂದುವಂತಹ ವಿಷಯಗಳನ್ನು ಮತ್ತು ಉತ್ತಮ–ಗುಣಮಟ್ಟದ ಸಂಪನ್ಮೂಲಗಳನ್ನು ಒದಗಿಸಿ ವಿದ್ಯಾರ್ಥಿಗಳ ಸಮಯ ಮತ್ತು ಶ್ರಮವನ್ನು ಉಳಿಸಬೇಕು.

**3. ಮಾರ್ಗದರ್ಶಕ ಮತ್ತು ಬೆಂಬಲಿಗ:**

- **ವೈಯಕ್ತಿಕ ಸಾಮರ್ಥ್ಯವನ್ನು ಅವಲಂಬಿಸಿ ಕಲಿಯಲು ಸಹಾಯ ಮಾಡಬೇಕು:** ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಅಗತ್ಯ, ಆಸಕ್ತಿ ಮತ್ತು ಕಲಿಕೆಯ ಸಾಮರ್ಥ್ಯಗಳನ್ನು ಅವಲಂಬಿಸಿ ಅದಕ್ಕೆ ತಕ್ಕಂತಹ ವಿಧಾನಗಳನ್ನು ಅನುಸರಿಸುವಂತೆ ಮಾರ್ಗದರ್ಶನಮಾಡಬೇಕು. ಈ ಕಾರ್ಯವನ್ನು ಮಾಡುವುದು ಆನ್‌ಲೈನ್ ಕಲಿಕೆಯ ವಿಧಾನಕ್ಕೆ ಸಾಧ್ಯವಾಗುವುದಿಲ್ಲ.
- **ಮಾನಸಿಕ ಬಲವನ್ನು ಹೆಚ್ಚಿಸುವುದು:** ಶಿಕ್ಷಕರು ವಿದ್ಯಾರ್ಥಿಗಳ ಮಾನಸಿಕ ಬಲವನ್ನು ಹೆಚ್ಚಿಸುವ ಹೊಣೆಯನ್ನು ಹೊಂದಿರಬೇಕು ಮತ್ತು ಅವರು ಸಕಾರಾತ್ಮಕ ಗುಣಗಳನ್ನು ಬೆಳಸಿಕೊಂಡು ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ತುಂಬಬೇಕು.

**4. ಕೌಶಲಾಭಿವೃದ್ಧಿ:**

- **ಸಾಫ್ಟ್ ಸ್ಕಿಲ್ಸ್:** ಆಧುನಿಕ ಕೆಲಸದ ವಾತಾವರಣದಲ್ಲಿ ಅತ್ಯಗತ್ಯವಾಗಿರುವ ಸಂವಹನ, ಸಹಯೋಗ ಮತ್ತು ಸಮಸ್ಯೆ–ಪರಿಹರಿಸುವ ಕೌಶಲಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ತರಬೇತಿ ನೀಡಬೇಕು.
- **ಡಿಜಿಟಲ್ ಸಾಕ್ಷರತೆ:** ಡಿಜಿಟಲ್ ಉಪಕರಣಗಳು ಮತ್ತು ಸಂಪನ್ಮೂಲಗಳನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಬೇಕೆಂಬುದನ್ನು ಅವರು ವಿದ್ಯಾರ್ಥಿಗಳಿಗೆ ಕಲಿಸಬೇಕು.
- **ಜೀವನದ ನೈಜ ಸಮಸ್ಯೆಗಳನ್ನು ಎದುರಿಸುವ ಪ್ರವೃತ್ತಿ:** ವಿದ್ಯಾರ್ಥಿಗಳು ತರಗತಿಯ ಕಲಿಕೆಯ ಮೂಲಕ ಜೀವನದ ನೈಜ ಸಮಸ್ಯೆಗಳನ್ನು ಎದುರಿಸುವ ಪ್ರವೃತ್ತಿಯನ್ನು ಬೆಳಸಿಕೊಳ್ಳುವ ಅಗತ್ಯವಿದೆ. ಇದಕ್ಕೆ ಶಿಕ್ಷಕರು ಸಹಾಯ ಮಾಡಬೇಕು.

**5. ಜೀವಮಾನದುದ್ದಕ್ಕೂ ಅನ್ವೇಷಣೆಯ ಕುತೂಹಲ ಮತ್ತು ವಿದ್ಯಾರ್ಜನೆಯ ಪ್ರವೃತ್ತಿ:**

- ವಿದ್ಯಾರ್ಥಿಗಳು ವಿಷಯಗಳನ್ನು ಆಳವಾಗಿ ಅನ್ವೇಷಿಸುವುದನ್ನು ಮತ್ತು ಅವರ ತರಗತಿಯ ಆಚೆಗಿನ ಜ್ಞಾನವನ್ನು ಆರ್ಜಿಸುವುದನ್ನು ಪ್ರೋತ್ಸಾಹಿಸುವ ಮೂಲಕ ಕಲಿಕೆಯ ಪ್ರೀತಿಯು ಶಿಕ್ಷಕರು ಅವರಲ್ಲಿ ಉಜ್ವಲವಾಗುವಂತೆ ಮಾಡಬೇಕು.

**6. ಮೌಲ್ಯಮಾಪನ ಮತ್ತು ಪ್ರತಿಕ್ರಿಯೆ:**

- ಶಿಕ್ಷಕರು ವಿವಿಧ ವಿಧಾನಗಳ ಮೂಲಕ ವಿದ್ಯಾರ್ಥಿಗಳ ತಿಳುವಳಿಕೆಯ ಮೌಲ್ಯಮಾಪನ ಮಾಡಬೇಕಾಗುತ್ತದೆ, ಆಗಾಗ ತಮ್ಮ ಮೌಲ್ಯಮಾಪನದ ಫಲಿತಾಂಶಗಳನ್ನು ಅವರಿಗೆ ಒದಗಿಸಿ ಅವರ ಭವಿಷ್ಯದ ವೃತ್ತಿಜೀವನವನ್ನು ನಿರ್ಮಿಸಿಕೊಳ್ಳಲು ಸಹಾಯಮಾಡಬೇಕು.

**ನೈತಿಕ ಮತ್ತು ಜವಾಬ್ದಾರಿಯುತವಾಗಿ ಮಾಹಿತಿಯ ಬಳಕೆ:**

- ವಿದ್ಯಾರ್ಥಿಗಳು ಕೃತಿಚೌರ್ಯದಲ್ಲಿ ಪಾಲ್ಗೊಳ್ಳದಿರುವಂತೆ, ಇತರರ ಹಕ್ಕುಸ್ವಾಮ್ಯವನ್ನು ಉಲ್ಲಂಘಿಸದಂತೆ ಮತ್ತು ಅವರು ಆನ್‌ಲೈನ್‌ನಲ್ಲಿ ಪಡೆದ ಮಾಹಿತಿಯನ್ನು ಜವಾಬ್ದಾರಿಯುತವಾಗಿ ಬಳಸಿಕೊಳ್ಳುವಂತೆ ಶಿಕ್ಷಕರು ಅವರಲ್ಲಿ ನೈತಿಕತೆಯನ್ನು ಬೆಳಸಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಂತರ್ಜಾಲವು ಮಾಹಿತಿಯನ್ನು ಪಡೆಯಲು ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುತ್ತದೆ. ಹಾಗೆ ಪಡೆದ ಮಾಹಿತಿಯನ್ನು ಹೇಗೆ ಅರ್ಥೈಸಿಕೊಳ್ಳಬೇಕು, ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ಅರ್ಥಪೂರ್ಣವಾಗಿ ತಿಳಿಸುವಲ್ಲಿ ಶಿಕ್ಷಕರ ಪಾತ್ರವು ಮುಖ್ಯವಾಗಿದೆ. ಶಿಕ್ಷಕರು ತರಗತಿಯಲ್ಲಿ ಪಾಠವನ್ನು ಮಾಡುವಷ್ಟಕ್ಕೆ ಸೀಮಿತರಾದವರಲ್ಲ; ಅವರು ಕಲಿಕೆಯ ಪ್ರಕ್ರಿಯೆಯಲ್ಲಿ ಮಾರ್ಗದರ್ಶಕರು, ಸಹಾಯಕರು ಮತ್ತು ಮಾರ್ಗದರ್ಶಿಗಳಾಗಬೇಕು, ಸಂಕೀರ್ಣವಾಗುತ್ತಿರುವ ಜಗತ್ತಿನಲ್ಲಿ ವಿದ್ಯಾರ್ಥಿಗಳು ತಮ್ಮ ತಿಳಿವಳಿಕೆಯನ್ನು ಬೆಳಸಿಕೊಂಡು, ಉತ್ತಮ ನಾಗರಿಕರಾಗಲು ಅವರಿಗೆ ಸಹಾಯಮಾಡಬೇಕು.

## ಪದವಿ ಪೂರ್ವ ಶಿಕ್ಷಣ ಇಲಾಖೆ ಬೋಧಕೇತರ ನೌಕರರ ಸಂಘ 2025ನೆಯ ಸಾಲಿನ ಕ್ಯಾಲೆಂಡರ್ ಬಿಡುಗಡೆ

# ಬೋಧಕೇತರ ನೌಕರರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು

"ಶಿಕ್ಷಣ ಇಲಾಖೆಯಲ್ಲಿ ಶೈಕ್ಷಣಿಕ ಕಾರ್ಯಚಟುವಟಿಕೆಗಳು ಎಷ್ಟು ಪ್ರಮುಖ ಪಾತ್ರ ವಹಿಸುತ್ತಿವೆಯೋ, ಅಷ್ಟೇ ಪ್ರಮುಖ ಪಾತ್ರವನ್ನು ಆಡಳಿತಾತ್ಮಕ ಕಾರ್ಯಚಟುವಟಿಕೆಗಳೂ ಪಾತ್ರವಹಿಸುತ್ತಿವೆ. ಈ ಆಡಳಿತ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ನೌಕರರು ತಮಗೆ ವಹಿಸಿದ್ದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರೆ ಮಾತ್ರ ಇಲಾಖೆಯ ಪ್ರಗತಿ ಸಾಧ್ಯ. ನೌಕರರ ಆವಶ್ಯಕತೆಗಳನ್ನು ಈಡೇರಿಸಿಕೊಳ್ಳುವಲ್ಲಿ ಅವರ ಹಕ್ಕುಗಳಿಗೆ ಚ್ಯುತಿಬಾರದಂತೆ ಸಕಾಲದಲ್ಲಿ ಸಿಗುವ ಸೌಲಭ್ಯಗಳನ್ನು ಸರ್ಕಾರ ಹಾಗೂ ಇಲಾಖೆಯಿಂದ ಪಡೆಯಲು ಸಂಘದ ಆವಶ್ಯಕತೆಯಿರುತ್ತದೆ. ಬೋಧಕೇತರ ನೌಕರರಿಗೆ ಪದೋನ್ನತಿ ನೀಡುವಲ್ಲಿ ಹಾಗೂ ನೌಕರರ ಕುಂದು-ಕೊರತೆಗಳನ್ನು ಆಲಿಸಿ ಅವುಗಳನ್ನು ಸರಿಪಡಿಸುವಲ್ಲಿ ನಿರ್ದೇಶಕರು, ಜಂಟಿ ನಿರ್ದೇಶಕರು ಉಳಿದ ಅಧಿಕಾರಿಗಳು ನೀಡುತ್ತಿರುವ ಸಹಾಯ, ಸಹಕಾರ ಸ್ಮರಣೀಯವಾಗಿದೆ. ಬೋಧಕೇತರ ನೌಕರರ ಹಿತಾಸಕ್ತಿಗಾಗಿ ಸಂಘವು ಅವಿರತವಾಗಿ ಶ್ರಮಿಸುತ್ತಿದೆ, ನೌಕರರಿಗೆ ಸಕಾಲದಲ್ಲಿ ಪದೋನ್ನತಿ ಸೌಲಭ್ಯ ಕೊಡಿಸುವಲ್ಲಿ ಹಾಗೂ ಜೇಷ್ಠತಾ ಪಟ್ಟಿ, ಪರಿಷ್ಕರಣೆ ಮಾಡಿಸುವಲ್ಲಿ ಸಂಘವು ಯಶಸ್ವಿಯಾಗಿದೆ. ಪ್ರಸಕ್ತ ಸನ್ನಿವೇಶದಲ್ಲಿ ಬೋಧಕೇತರ ನೌಕರರನ್ನು ನೋಡುವ ದೃಷ್ಟಿ ಬದಲಾಗಬೇಕು. ಹಾಗೆಯೇ ನಮ್ಮ ನೌಕರರು ಸಹ ಯಾವುದೇ ಆಸೆ-ಆಮಿಷಗಳಿಗೆ ಒಳಗಾದಂತೆ ಪ್ರಾಮಾಣಿಕವಾಗಿ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸಬೇಕು. ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ನೌಕರರು ಕಾರ್ಯನಿರ್ವಹಿಸಿದರೆ ಇಲಾಖೆಯ ಪ್ರಗತಿಗೆ ಸಹಾಯವಾಗುತ್ತದೆ" ಎಂದು ಬೆಂಗಳೂರಿನ ಕರ್ನಾಟಕ ರಾಜ್ಯ ಪದವಿಪೂರ್ವ ಶಿಕ್ಷಣ ಇಲಾಖೆಯ ಬೋಧಕೇತರ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಮಧುಸೂಧನ್ ಎ ಮಾಗಿ ಅವರು ಅಭಿಪ್ರಾಯಪಟ್ಟರು.




**ಚಿತ್ರದಲ್ಲಿ ಬೋಧಕೇತರ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಮಧುಸೂಧನ್ ಎ ಮಾಗಿ, ಉಪನಿರ್ದೇಶಕರಾದ ಡಾ. ಬಾಲಗುರುಮೂರ್ತಿ, ಡಾ. ಎಂ.ಆರ್. ಹುಲಿನಾಯ್ಕರ್, ಬೆಂಗಳೂರಿನ ಜಂಟಿ ನಿರ್ದೇಶಕರಾದ ಪಿ. ಉಮೇಶ್, ಇಲಾಖೆಯ ಸಹಾಯಕ ನಿರ್ದೇಶಕರಾದ ಪಿ. ಆನಂದ್, ಎಂ.ಎಸ್. ಪಾಟೀಲ್, ಟಿ.ವಿ. ಬ್ರಹ್ಮದೇವಯ್ಯ, ಬಿ.ಎಂ. ಅಶ್ವಿನಿ ಕುಮಾರ್, ಕೆ. ಪ್ರಭಾಕರ ರೆಡ್ಡಿ, ತ್ರಿವೇಣಿ, ಕೆ.ಹೆಚ್. ಉಮಾ, ರಾಮಣ್ಣ, ಮತ್ತು ಪುನೀತ್.**

ಕರ್ನಾಟಕ ರಾಜ್ಯ ಪದವಿಪೂರ್ವ ಶಿಕ್ಷಣ ಇಲಾಖೆಯ ಬೋಧಕೇತರ ನೌಕರರ ಸಂಘದ ತುಮಕೂರು ಜಿಲ್ಲಾ ಘಟಕ ಹಾಗೂ ಶ್ರೀದೇವಿ ಪದವಿಪೂರ್ವ ಕಾಲೇಜು ಇವರುಗಳ ಸಂಯುಕ್ತಾಶ್ರಯದಲ್ಲಿ ನೂತನ ವರ್ಷ, 2025ರ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಜನವರಿ 4ರಂದು ಹಮ್ಮಿಕೊಳ್ಳಲಾಗಿತ್ತು.

ತುಮಕೂರಿನ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಡಾ. ಬಾಲಗುರುಮೂರ್ತಿಯವರು ಮಾತನಾಡುತಾ""ಬೋಧಕ ನೌಕರರಂತೆ ಬೋಧಕೇತರ ನೌಕರರು ಅವರಿಗೆ ಬೇಕಾಗುವ ಸೌಲಭ್ಯಗಳನ್ನು ಪಡೆಯಲು ಸಂಘ ಕಟ್ಟಿರುವುದು ಉತ್ತಮ ಬೆಳವಣಿಗೆ. ಸಂಘದ ಪ್ರಥಮ ಕ್ಯಾಲೆಂಡರ್ ಈ ಜಿಲ್ಲೆಯಲ್ಲಿ ಬಿಡುಗಡೆಯಾಗುತ್ತಿರುವುದು ಸಂತೋಷದ ವಿಷಯವಾಗಿದೆ" ಎಂದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್‌ರವರು ಮಾಡಿ "ಪ್ರಸ್ತಕ ಸನ್ನಿವೇಶದಲ್ಲಿ ಮಕ್ಕಳಿಗೆ ಪದವಿಪೂರ್ವ ಶಿಕ್ಷಣವು ಅತ್ಯಂತ ಮಹತ್ತ್ವದ್ದಾಗಿದೆ. ಮಕ್ಕಳು ನೀಟ್, ಇಂಜಿನಿಯರಿಂಗ್ ಜೆ.ಇ.ಇ. ಅತಂಹ ಕೋರ್ಸ್‌ಗಳಿಗೆ ಹೋಗಲು ಪಿ.ಯು. ಶಿಕ್ಷಣ ಮಹತ್ತರ ಪಾತ್ರ ವಹಿಸುತ್ತದೆ. ಸಂಘ ಕ್ಯಾಲೆಂಡರ್ ಬಿಡುಗಡೆ ಮಾಡಿರುವುದು ಉತ್ತಮ ಬೆಳವಣಿಗೆ. ಪ್ರಸ್ತಕ ಸನ್ನಿವೇಶದಲ್ಲಿ ಸಂಘಟನೆಯು ಬಹಳ ಮಹತ್ತ್ವ ಪಡೆದಿದೆ. ಸಂಘಟನೆಯ ಜೊತೆಜೊತೆಗೆ ಮಕ್ಕಳಿಗೆ ಶೈಕ್ಷಣಿಕ ವಾತಾವರಣ ಕಲ್ಪಿಸುವುದೂ ಆವಶ್ಯಕವಿದೆ. ಡಾ. ಬಾಲಗುರುಮೂರ್ತಿ ಅವರು ತುಮಕೂರು ಜಿಲ್ಲೆಯ ಉಪನಿರ್ದೇಶಕರಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ" ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಶಾಲಾಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಪಿ. ಉಮೇಶ್ ಅವರು ಮಾತನಾಡುತ್ತಾ "ರಾಜ್ಯದ ಆಡಳಿತ ನಡೆಸುವುದರಲ್ಲಿ ಬೋಧಕೇತರ ನೌಕರರ ಪಾತ್ರ ಬಹಳ ಪ್ರಮುಖವಾದ್ದು, ಇಲಾಖೆಯು ಪ್ರಗತಿ ಸಾಧಿಸಬೇಕಾದರೆ ಅಧಿಕಾರಿ ಮತ್ತು ಬೋಧಕರ ನೌಕರರು ಪ್ರಾಮಾಣಿಕವಾಗಿ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸುವುದು ತುಂಬಾ ಅಗತ್ಯ" ಎಂದರು.

ಬೆಂಗಳೂರಿನ ಶಾಲಾಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರಾದ ಪಿ. ಆನಂದ್ ಅವರು ಮಾತನಾಡುತ್ತಾ "ಬೋಧಕೇತರ ನೌಕರರು ನಿರ್ದೇಶಕರ ಕಚೇರಿಯ ಅಧಿಕಾರಿಗಳೊಂದಿಗೆ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರೊಂದಿಗೆ ಕಾಲೇಜು ಹಂತದಲ್ಲಿ ಪ್ರಾಂಶುಪಾಲರೊಂದಿಗೆ ಕೈಜೋಡಿಸಿ ಕಾರ್ಯನಿರ್ವಹಿಸಿದರೆ ಇಲಾಖೆಯು ಪ್ರಗತಿ ಸಾಧಿಸುವುದರಲ್ಲಿ ಯಾವುದೇ ಸಂದೇಹವಿಲ್ಲ" ಎಂದರು.

**▪ ವರದಿ: ಎನ್.ಆನಂದ**

# ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ

ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ಕರ್ನಾಟಕವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿಯೆಂದು ರಾಜ್ಯ ಸ್ಕೌಟ್ಸ್ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಅವರು ಹೇಳಿದರು. ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ ಮತ್ತು ಜನಸ್ತು ಸಂಸ್ಥೆಯ ಸಹಯೋಗದೊಂದಿಗೆ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಪರ್ವತ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಪ್ರಕೃತಿ ಅಧ್ಯಯನ ಚಾರಣ ಶಿಬಿರದ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ರಾಜ್ಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯನ್ನು ಕಟ್ಟಿ ಬೆಳೆಸುವಲ್ಲಿ ಕೊಂಡಜ್ಜಿ ಬಸಪ್ಪ ಅವರ ಸಾಧನೆಯನ್ನು ಸ್ಮರಿಸಿದರು. ಪ್ರಕೃತಿ ಮತ್ತು ಮಾನವ ಸಂಬಂಧ ಬೆಸೆಯುವಲ್ಲಿ ಇಂತಹ ಚಾರಣ ಕಾರ್ಯಕ್ರಮಗಳು ಪ್ರಯೋಜನಕಾರಿ ಎಂದು ಅವರು ಹೇಳಿದರು.

ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ ಆವರಣದಲ್ಲಿ ಡಿಸೆಂಬರ್ 30ರಂದು ನೂತನ ವರ್ಷದ-2025 ಕ್ಯಾಲೆಂಡರ್ ಹಾಗೂ ಡೈರಿಯನ್ನು ರಾಜ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಅವರು ಬಿಡುಗಡೆಮಾಡಿದರು.



ಕಾರ್ಯಕ್ರಮದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕೇಂದ್ರ ಸ್ಥಾನಿಕ ಆಯುಕ್ತರಾದ ಡಾ. ಬಿ.ಆರ್. ರಾಮಚಂದ್ರಕಾಳೆರವರು ಮಾತನಾಡಿ, 'ಪ್ರಕೃತಿ ಮತ್ತು ವನ್ಯಜೀವಿಗಳ ಸಂಬಂಧ ಹಾಗೂ ನಗರ ಪ್ರದೇಶದ ಮಕ್ಕಳಿಗೆ ಗ್ರಾಮೀಣ ಪರಿಸರವನ್ನು ಮನದಟ್ಟು ಮಾಡಿಕೊಡಲು ಇಂತಹ ಶಿಬಿರಗಳ ಆವಶ್ಯಕತೆಯಿದೆ' ಎಂದರು. ತುಮಕೂರಿನ ಸ್ಕೌಟ್ಸ್‌ನ ಮುಖ್ಯಸ್ಥರಾದ ಶ್ರೀಮತಿ ಆಶಾ ಪ್ರಸನ್ನ ಅವರು ಮಕ್ಕಳಿಗೆ ಹಿತವಚನ ಹೇಳಿದರು.

ನಂತರ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಹೀಗಿವೆ. "ಇಂತಹ ಪ್ರಮುಖ ಕಾರ್ಯಕ್ರಮವೊಂದು ನಮ್ಮಲ್ಲಿ ನಡೆಯಲು ಮುಖ್ಯ ಕಾರಣಕರ್ತರಾದವರು ಮಾಜಿ ಸಚಿವರು ಮತ್ತು ಪ್ರಸ್ತುತ ಕರ್ನಾಟಕ ರಾಜ್ಯ ಸ್ಕೌಟ್ಸ್‌ನ ಆಯುಕ್ತರಾದ ಪಿ.ಜಿ.ಆರ್. ಸಿಂಧ್ಯ ಅವರು. ಅವರಿಗೆ ಧನ್ಯವಾದಗಳು.

ಸ್ಕೌಟ್ಸ್‌ನ ಇತಿಹಾಸ ರೋಮಾಂಚಕಾರಿಯಾಗಿದೆ. 1907ರಲ್ಲಿ ಇಂಗ್ಲೆಂಡ್ ದೇಶದ ಬ್ರೌನ್ ಸೀ ದ್ವೀಪದಲ್ಲಿ ನಿವೃತ್ತ ಜನರಲ್ ರಾಬರ್ಟ್ ಬೇಡನ್ ಪೊವೆಲ್ ಅವರು ಇಪ್ಪತ್ತು ಜನ ಹುಡಗರೊಂದಿಗೆ ಸ್ಕೌಟ್ ಚಳವಳಿಯನ್ನು ಪ್ರಾರಂಭಿಸಿದರು. ಅಂದಿನಿಂದಲೂ ಮೈಸೂರು ಸಂಸ್ಥಾನದಲ್ಲಿ ಸೌಟ್ಸ್ ಚಳವಳಿಗೆ ಪ್ರೋತ್ಸಾಹ ದೊರೆಯಿತು.

ಸ್ಕೌಟ್ ಚಳವಳಿಯ ಮುಖ್ಯ ಉದ್ದೇಶವನ್ನು ಹೀಗೆ ವರ್ಣಿಸಲಾಗಿದೆ: 'ಯುವಜನರು ತಮ್ಮ ಸಂಪೂರ್ಣ ದೈಹಿಕ, ಬೌದ್ಧಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯಗಳನ್ನು ಬೆಳಸಿಕೊಂಡು ಜವಾಬ್ದಾರಿಯುತ ನಾಗರಿಕರಾಗಿ, ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಅಭಿವೃದ್ಧಿಗೆ ಮಹತ್ತ್ವದ ಕೊಡುಗೆ ಕೊಡಬೇಕು.'

### ರಾಜಕೀಯ ಮುತ್ಸದ್ದಿ

ಕರ್ನಾಟಕದ ಸಾರ್ವಜನಿಕ ಬದುಕಿನಲ್ಲಿ ಬಹುದೊಡ್ಡ ಹೆಸರು ಮಾಡಿರುವ ಮತ್ತು ನಮ್ಮೆಲ್ಲರ ನಾಯಕರಾಗಿರುವ ಪಿ.ಜಿ.ಆರ್. ಸಿಂಧ್ಯ ನನಗೆ ತುಂಬಾ ಆತ್ಮೀಯರು. ಶ್ರೀಯುತರು ಕರ್ನಾಟಕ ರಾಜ್ಯ ಸ್ಕೌಟ್ಸ್‌ನ ಮುಖ್ಯ ಆಯುಕ್ತಕರಾಗಿರುವುದು ಆ ಸಂಸ್ಥೆಯ ಅದೃಷ್ಟ. ಆರು ಬಾರಿ ಶಾಸಕರಾಗಿ ಮುಖ್ಯಮಂತ್ರಿಯ ಅಭ್ಯರ್ಥಿಯೆಂದೆ ಪರಿಗಣಿತವಾಗಿದ್ದ ಸಿಂಧ್ಯ ಸಕ್ರಿಯ ರಾಜಕಾರಣದ ಅನಂತರ ಸ್ಕೌಟ್ಸ್ ಕ್ಷೇತ್ರಕ್ಕೆ ಬಂದಿರುವುದು ದೇಶಕ್ಕೆ ಬಹುದೊಡ್ಡ ಮಾದರಿಯಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ ಅವರ ಕೊಡುಗೆ ಕರ್ನಾಟಕ ರಾಜ್ಯಕ್ಕೆ ಅಮೂಲ್ಯವಾಗಿದೆ. ಅವರು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಸಚಿವರಾಗಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಇಂದು ಕರ್ನಾಟಕ ರಾಜ್ಯ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವನ್ನು ನೀಡಿದೆ. ಇದಕ್ಕೆ ಮುಖ್ಯ ಕಾರಣಕರ್ತರು ಪಿ.ಜಿ.ಆರ್.ಸಿಂಧ್ಯ ಅವರು ಎಂದರೆ ನಿಮಗೆ ಆಶ್ಚರ್ಯವಾಗಬಹುದು.

ಇಡೀ ದೇಶದಲ್ಲಿ ಕರ್ನಾಟಕದ ಕೆಎಸ್‌ಆರ್‌ಟಿಸಿಗೆ ವಿಶೇಷವಾದ ಸ್ಥಾನವಿದೆ. ಆ ಕಾಲದಲ್ಲಿ ವಿದ್ಯಾರ್ಥಿಗಳಿಗೆ 'ಉಚಿತ ಬಸ್ ಪ್ರಯಾಣ'ದ ವ್ಯವಸ್ಥೆ ಮಾಡಿದ ಕೀರ್ತಿ ಸಿಂಧ್ಯ ಅವರದು.

ಇಂದು ಸ್ಥಳೀಯ ಸಂಸ್ಥೆಗಳಲ್ಲಿ ಅಂದರೆ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ಸೌಲಭ್ಯವಿರುವುದಕ್ಕೆ ಮುಖ್ಯ ಕಾರಣ 1994-95ರಲ್ಲಿ ಸಮಾಜಕಲ್ಯಾಣ ಖಾತೆ ಸಚಿವರಾಗಿದ್ದ ಸಿಂಧ್ಯ ಅವರು. ಪಿ.ಜಿ.ಆರ್. ಸಿಂಧ್ಯ ಅವರು ಹೋರಾಟದಿಂದ ಮೇಲೆಬಂದ ನಾಯಕರಾಗಿದ್ದಾರೆ.

ಶ್ರೀ ಸಿಂಧ್ಯ ಅವರು ನಮ್ಮ ಶ್ರೀದೇವಿ ಶಿಕ್ಷಣ ಸಂಸ್ಥೆಯ ವಿಚಾರದಲ್ಲಿ ಅತ್ಯಂತ ಕಳಕಳಿ ಹೊಂದಿದ್ದಾರೆ. ನಮಗೆ ಮೆಡಿಕಲ್ ಕಾಲೇಜ್ ದೊರೆಯಲು ಅವರ ಆಶೀರ್ವಾದವೂ ಕಾರಣವಾಗಿದೆ. ನಮ್ಮ ಬೆಳವಣಿಗೆಯಲ್ಲಿ ಸಹಾಯಕವಾಗಿರುವ ಅವರಿಗೆ ನೂರು ನಮನಗಳು".

**▪ ವರದಿ: ಎನ್. ಆನಂದ**




ಚಿತ್ರದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ. ಎಂ.ಆರ್.ಹುಲಿನಾಯ್ಕರ್, ಡಾ. ರಮಣ್ ಆರ್.ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಎಫ್‌ಕೆಸಿಸಿಐಎಲ್ ನಿರ್ದೇಶಕಿಯಾದ ಬಿ.ಎ.ತೇಜಶ್ರೀ, ವಾಣಿಜ್ಯೋದ್ಯಮಿ ರುತುಪರ್ಣ ಶರ್ಮಾ, ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್, ಡಾ.ಕೆ.ಎಸ್.ರಾಮಕೃಷ್ಣ, ಡೀನ್ ಡಾ.ಎನ್.ಚಂದ್ರಶೇಖರ್, ಡಾ.ಬಿ.ಎನ್.ಪ್ರತಾಪ್, ಮತ್ತು ಪ್ರೊ. ಪ್ರವೀಣ್ ಕುಮಾರ್.

**ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪಿ.ಜಿ.ವಿದ್ಯಾರ್ಥಿಗಳಿಗೆ ಗ್ರ್ಯಾಜುಯೇಷನ್‌ಡೇ**

# ಪ್ರಥಮ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸ್ವಾಗತ

"ಇಂದಿನ ಡಿಜಿಟಲ್ ಯುಗದಲ್ಲಿ ವಿದ್ಯಾರ್ಥಿಗಳು ಕೌಶಲ್ಯದ ಜೊತೆಗೆ ಕುಟುಂಬದ ಕಾಳಜಿಯುಳ್ಳವರಾಗಿರಬೇಕು. ಮಾನವ ಸಂಪನ್ಮೂಲ ಮತ್ತು ಮಾರುಕಟ್ಟೆ ವಿಷಯಗಳನ್ನು ಪುಸ್ತಕಗಳಿಗಿಂತ ಅನುಭವದಿಂದ ಕಲಿಯುವ ಅಗತ್ಯವಾಗಿದೆ. ಅದನ್ನು ರೂಢಿಸಿಕೊಂಡಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ. ಒಬ್ಬ ಯಶಸ್ವಿ ಉದ್ಯಮಿಯಾಗಿ ಹೇಗೆ ಬೆಳೆಯಬಹುದು" ಎಂದು ಬೆಂಗಳೂರಿನ ಎಫ್.ಕೆ.ಸಿ.ಸಿ.ಐ.ಎಲ್.ನಿರ್ದೇಶಕಿಯಾದ ಬಿ.ಎ.ತೇಜಶ್ರೀರವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯ ವತಿಯಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಎಂ.ಬಿ.ಎ., ಎಂ.ಟೆಕ್. ಹಾಗೂ ಪ್ರಥಮ ವರ್ಷದ ಎಂ.ಬಿ.ಎ, ಎಂ.ಸಿ.ಎ, ಎಂ.ಟೆಕ್ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭವನ್ನು ಜನವರಿ 11ರಂದು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ. ಎಂ.ಆರ್. ಹುಲಿನಾಯ್ಕರ್ ರವರು ಮಾತನಾಡಿ ಪದವಿ ಪ್ರಧಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಆರ್ ಹುಲಿನಾಯ್ಕರ್‌ರವರು ಮಾತನಾಡುತ್ತಾ 'ವಿದ್ಯಾರ್ಥಿಗಳ ನಡೆ–ನುಡಿ ಹಾಗೂ ಕಾಲೇಜಿನ ಚಟುವಟಿಕೆಗಳಲ್ಲಿ ತುಂಬಾ ಉತ್ತಮವಾಗಿ ಭಾಗವಹಿಸಬೇಕು. ಸಂಸ್ಥೆಗೆ ಮತ್ತು ಪೋಷಕರಿಗೆ ಒಳ್ಳೆಯ ಹೆಸರನ್ನು ತರಬೇಕು' ಎಂದರು. ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶನರಾದ ಎಂ.ಎಸ್. ಪಾಟೀಲ್‌ರವರು ಮಾತನಾಡಿ 'ಪದವೀಧರರು ಚತುರಕಾರ್ಯ ಪ್ರವೃತ್ತಿಯನ್ನು ತಮ್ಮ ವೃತ್ತಿಯಲ್ಲಿ ಅಳವಡಿಸಿ ಕೊಂಡರೆ ಯಶಸ್ಸು ಖಂಡಿತವಾಗಿಯೂ ದೊರಕುತ್ತದೆ' ಎಂದರು. ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ವಾಣಿಜ್ಯೋದ್ಯಮಿಯಾದ ರುತುಪರ್ಣ ಶರ್ಮಾ ಅವರು 'ವಿದ್ಯಾರ್ಥಿಗಳು ಅತ್ಯುತ್ತಮವಾದ ಕನಸ್ಸನ್ನು ಕಾಣಬೇಕು. ಅದರ ನನಸ್ಸಿಗಾಗಿ ನಿರಂತರ ಪ್ರಯತ್ನಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಜೀವನದಲ್ಲಿ ಗುರಿಯೊಂದನ್ನಿಟ್ಟುಕೊಂಡು ಮುಂದೆ ಸಾಗಬೇಕು" ಎಂದರು. ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್‌ರವರು ಗುಣಾತ್ಮಕ ಶಿಕ್ಷಣ ನೀಡುವುದರಲ್ಲಿ ಶ್ರೀದೇವಿ ವಿದ್ಯಾಸಂಸ್ಥೆಯೂ ಬಹುಮುಖ್ಯ ಪಾತ್ರವನ್ನು ವಿವರಿಸಿದರು.

# ಸಂಶೋಧನಾ ಕಾರ್ಯ ಉನ್ನತ ಶಿಕ್ಷಣದ ಜವಾಬ್ದಾರಿ

"ಮನುಷ್ಯನ ಬದುಕಿನಲ್ಲಿ ಕಾಲ ನಿರಂತರವಾಗಿ ಓಡುತ್ತಿರುತ್ತದೆ. ಅದಕ್ಕೆ ಯಾರೂ ವಿಶೇಷವಾದ ಪ್ರಯತ್ನ ಮಾಡಬೇಕಾಗಿಲ್ಲ. ಕಾಲದ ಓಡುವಿಕೆಯ ಸಂದರ್ಭದಲ್ಲಿ ಮನುಷ್ಯರು ತಮ್ಮ ಪ್ರಾಮಾಣಿಕ ದುಡಿಮೆ ಹಾಗೂ ಕ್ರಿಯಾಶೀಲತೆಯಿಂದ ಕೆಲಸ ಮಾಡಿದರೆ ಅದು ಸಮಾಜೋಪಯೋಗಿಯಾಗುತ್ತದೆ. ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳಿಗೆ ವಿಶೇಷವಾದ ಸಾಮಾಜಿಕ ಜವಾಬ್ದಾರಿ ಇದೆ. ನಮ್ಮ ಕಾರ್ಯಶೀಲತೆಯು ವ್ಯಕ್ತಿಗಳು ಮತ್ತು ಕುಟುಂಬಗಳ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ದೃಷ್ಟಿಕೋನ ವಿದ್ಯಾರ್ಥಿ, ರೋಗಿ ಹಾಗೂ ಸಮಾಜದ ಮೇಲೆ ಕೇಂದ್ರಿಕೃತವಾಗಿರಬೇಕು. ನಮ್ಮ ಆಸ್ಪತ್ರೆಯಲ್ಲಿ ಹತ್ತಕ್ಕಿಂತಲೂ ಹೆಚ್ಚು ವೈದ್ಯಕೀಯ ವಿಭಾಗದಲ್ಲಿ ಸೂಪರ್‌ಸ್ಪೆಷಲಿಸ್ಟ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. Cardiology, Oncology, Plastic Surgery, Neuro Surgery, Neurology, Urology, Paediatric, Surgery ಮೊದಲಾದ ವಿಭಾಗಗಳಲ್ಲಿ ಅತ್ಯುನ್ನತ ದರ್ಜೆಯ ಚಿಕಿತ್ಸಾ ಸೌಲಭ್ಯವನ್ನು ಶ್ರೀದೇವಿ ವೈದ್ಯಕೀಯ ಸಂಶೋಧನಾ ಆಸ್ಪತ್ರೆ ಹೊಂದಿದೆ. ಈ ಸೌಲಭ್ಯವು ಜನಸಾಮಾನ್ಯರಿಗೆ ತಲುಪಿದಾಗ ಸಾರ್ಥಕತೆ ನಮಗೆ ದೊರೆಯುತ್ತದೆ.

ಅದೇ ರೀತಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿಗೆ ನ್ಯಾಕ್‌ನಿಂದ 'ಎ' ಮಾನ್ಯತೆ ದೊರೆತಿದೆ. ಇದು ಇಲ್ಲಿನ ಬೋಧನಾ ಸೌಲಭ್ಯ ಮತ್ತು ಕಾಲೇಜಿನ ಸುಮಧುರ ವಾತಾವರಣಕ್ಕೆ ದೊರೆತ ಮನ್ನಣೆಯಾಗಿದೆ. ಈ ವರ್ಷದಿಂದ ಫಾರ್ಮಸಿಯಲ್ಲಿ M.Pharm. (Pharmaceutics) and M. Pharm. (Pharmacology), Pharm D ಯಲ್ಲಿ ಪದವಿ ಪಡೆಯುವ ಅವಕಾಶಗಳು ಸಹ ಲಭ್ಯವಾಗಿವೆ. ಇಂತಹ ಸೌಲಭ್ಯಗಳು ಶ್ರೀದೇವಿ ಸಂಸ್ಥೆಗೆ ದೊರೆಯಲು ಇಲ್ಲಿನ ಬೋಧನಾ ಸಿಬ್ಬಂದಿಯವರ ಪ್ರಾಮಾಣಿಕ ಕರ್ತವ್ಯ ನಿರ್ವಹಣೆ ಕಾರಣವಾಗಿದೆ. ಈ ಸಂಸ್ಥೆಯ ಫಲಿತಾಂಶಗಳು ಶೇಕಡ 90ಕ್ಕಿಂತಲೂ ಅಧಿಕವಾಗಿದೆ. ಇಲ್ಲಿ ಶಿಕ್ಷಣ ಪಡೆದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳು ಸುಲಭವಾಗಿ ದೊರೆಯುತ್ತಿವೆ. ಆದರೆ ನಾವು ಇಷ್ಟರಿಂದ ಸಂತೃಪ್ತರಾಗಬಾರದು. ನಮ್ಮ ಇಂಜಿನಿಯರಿಂಗ್ ಕಾಲೇಜಿನಲ್ಲಿ 24 ಜನ ಪಿಎಚ್.ಡಿ. ಪಡೆದ ಬೋಧನಾ ಸಿಬ್ಬಂದಿಯಿರುವುದು ಹೆಮ್ಮೆಯ ವಿಚಾರ. ಉನ್ನತ ಶಿಕ್ಷಣದಲ್ಲಿ ಸಂಶೋಧನೆಗೆ ಹೆಚ್ಚಿನ ಮಹತ್ತ್ವವಿದೆ. ಒಬ್ಬ ವ್ಯಕ್ತಿಯು ಪಿಎಚ್.ಡಿ. ಪಡೆಯುವುದು ತನ್ನ ಲೌಕಿಕ ಸ್ಥಾನಮಾನಕ್ಕಾಗಿ ಮಾತ್ರ. ಆದರೆ ಸಂಶೋಧನೆ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸುವುದರ ಜೊತೆಗೆ ಸಮಾಜಕ್ಕೆ ಹೊಸ ಕೊಡುಗೆಯನ್ನೂ ನೀಡುತ್ತದೆ. ಈ ದಿಸೆಯಲ್ಲಿ ನೀವುಗಳು ಆಲೋಚಿಸಬೇಕು" ಎಂದು ಶ್ರೀದೇವಿ ಸಮೂಹ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು, ಹೊಸವರ್ಷದ ಅಂಗವಾಗಿ ಜನವರಿ 1ರಂದು ಸಂಸ್ಥೆಯ ವಿವಿಧ ಅಧ್ಯಯನಗಳ ಪ್ರಾಂಶುಪಾಲರು ಮತ್ತು ಮುಖ್ಯಸ್ಥರ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು.




ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾನವ ಸಂಪನ್ಮೂಲ ಹಾಗೂ ಐಟಿ ನಿರ್ದೇಶಕ ಎಂ.ಎಸ್. ಪಾಟೀಲ್ ಅವರು "ಡಾ. ಹುಲಿನಾಯ್ಕರ್ ಅವರ ದೂರದೃಷ್ಟಿಯ ಫಲವಾಗಿ ಇಂದು ಶ್ರೀದೇವಿ ಶಿಕ್ಷಣ ಸಂಸ್ಥೆ ಬೃಹತ್ ವೃಕ್ಷವಾಗಿ ಬೆಳೆದಿದೆ. ಇದರ ಆಶ್ರಯದಲ್ಲಿ ಸಾವಿರಾರು ಜನರು ಹಾಗೂ ಅಸಂಖ್ಯಾತ ಯುವಜನರು ಅತ್ಯುನ್ನತ ಶಿಕ್ಷಣವನ್ನು ಪಡೆದು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಗುಣಮಟ್ಟಕ್ಕೆ ಅನುಗುಣವಾದ ಚಿಕಿತ್ಸಾ ಸೌಲಭ್ಯ ದೊರಕುತ್ತಿದೆ. ನಮ್ಮ ಶ್ರೀದೇವಿ ಸಂಸ್ಥೆಗೆ ಅಂಗಾಂಗ ದಾನದ ಪ್ರಕ್ರಿಯೆ ನಡೆಸುವ ನಿಟ್ಟಿನಲ್ಲಿ ಮಾನ್ಯತೆ ದೊರೆತಿದೆ. ಇಂಜಿನಿಯರಿಂಗ್ ಕಾಲೇಜಿಗೆ ನ್ಯಾಕ್ ಮಾನ್ಯತೆ ದೊರೆತಿದೆ. ಇವುಗಳನ್ನು ನಾವು ಸಕರಾತ್ಮಕವಾಗಿ ಬಳಸಿಕೊಂಡು ಶ್ರೀದೇವಿ ಸಂಸ್ಥೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಪ್ರತಿಜ್ಞೆಯನ್ನು ಹೊಸ ವರ್ಷದಲ್ಲಿ ಮಾಡಬೇಕಾಗಿದೆ" ಎಂದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಧರ್ಮದರ್ಶಿ ಶ್ರೀಮತಿ ಅಂಬಿಕಾ ಎಂ. ಹುಲಿನಾಯ್ಕರ್ ಅವರು "ಶ್ರೀದೇವಿ ಕುಟುಂಬ ಬಹಳ ದೊಡ್ಡದು ನಾವು ಪರಸ್ಪರರ ಕಷ್ಟ–ಸುಖಗಳನ್ನು ಹಂಚಿಕೊಂಡು ವಿಶ್ವಾಸದಿಂದ ಕೆಲಸ ಮಾಡುತ್ತಾ ಶ್ರೀದೇವಿ ವಿದ್ಯಾಸಂಸ್ಥೆಯ ಕೀರ್ತಿಯನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಬೇಕು" ಎಂದು ನುಡಿದರು.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ.ಎಲ್. ಹರೇಂದ್ರಕುಮಾರ್ ಅವರು "ಮೆಡಿಕಲ್ ಕಾಲೇಜಿನ ಮತ್ತು ಶ್ರೀದೇವಿ ವೈದ್ಯಕೀಯ ಆಸ್ಪತ್ರೆಯ ಬೆಳವಣಿಗೆಯನ್ನು ವಿವರಿಸಿ, ನವೆಂಬರ್ ತಿಂಗಳಲ್ಲಿ ಪ್ರಾರಂಭವಾದ Cath Lab and Hysteroscopeಗಳ ಬಗೆಗೆ ವಿವರಗಳನ್ನು ನೀಡಿದರು. ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಮುಂದಿನ ವರ್ಷಗಳಲ್ಲಿ ಮತ್ತಷ್ಟು ಮಹತ್ತ್ವದ ಸಾಧನೆ ಮಾಡಲಿದೆ" ಎಂದು ಹೇಳಿದರು.

ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್‌ರವರು ಇಂಜಿನಿಯರಿಂಗ್ ಕಾಲೇಜಿನ ಬೆಳವಣಿಗೆಯನ್ನು ಸುದೀರ್ಘವಾಗಿ ವಿವರಿಸಿದರು. ವರ್ಷದಿಂದ ವರ್ಷಕ್ಕೆ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರವೇಶದಲ್ಲಿ ಏರಿಕೆ ಉಂಟಾಗುತ್ತಿದೆ. ಇಂದು 1587 ಇಂಜಿನಿಯರಿಂಗ್ ವಿದ್ಯಾರ್ಥಿಗಳು ಈ ಕ್ಯಾಂಪಸ್‌ನಲ್ಲಿ ವಿವಿಧ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಪ್ರತಿ ವರ್ಷ ಗಣನೀಯ ಸಂಖ್ಯೆಯಲ್ಲಿ ರ‍್ಯಾಂಕ್‌ಗಳು ನಮ್ಮ ಕಾಲೇಜಿಗೆ ದೊರೆಯುತ್ತಿವೆ. ನಮ್ಮ ಕಾಲೇಜಿನ ವಿಶೇಷವಾದ ಅಂಶವೆಂದರೆ ವಿದ್ಯಾರ್ಥಿಗಳ ಮತ್ತು ಬೋಧನಾ ಸಿಬ್ಬಂದಿಗಳಲ್ಲಿ ಲಿಂಗಾನುಪಾತವು ಸಮಪ್ರಮಾಣದಲ್ಲಿರುವುದು" ಎಂದು ಹೇಳಿದರು.

ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ.ಸಿ. ಕೃಷ್ಣ ಮತ್ತು ಡಾ. ಸಿ.ಪಿ. ಚಂದ್ರಪ್ಪ, ವಿಜ್ಞಾನ ಮತ್ತು ಔಷಧಶಾಸ್ತ್ರದ ಪ್ರಾಂಶುಪಾಲರಾದ ಡಾ. ಗೋಪಾಲಕೃಷ್ಣ, ಫಿಜಿಯೋಥೆರಪಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಎ. ಆನಂದಿ, ಶ್ರೀದೇವಿ ನರ್ಸಿಂಗ್ ಕಾಲೇಜು, ರಮಣ ಮಹರ್ಷಿ ನರ್ಸಿಂಗ್ ಕಾಲೇಜು ಮತ್ತು ಶ್ರೀ ದುರ್ಗಾಂಬಾ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್. ಕೆ. ಮುನಿಸ್ವಾಮಿ, ಪ್ರೊ. ಎಸ್.ಉಷಾ, ಡಾ. ಅಂಬಾ ಹಾಗೂ ಶ್ರೀದೇವಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ತುಫಿ ಉಲ್ಲಾ ಅವರುಗಳು ತಮ್ಮ ಸಂಸ್ಥೆಗಳ ಬೆಳವಣಿಗೆಯ ವರದಿಯನ್ನು ಮಂಡಿಸಿದರು.

ಹೊಸ ವರ್ಷದ ಅಂಗವಾಗಿ ಕೇಕನ್ನು ಕತ್ತರಿಸಲಾಯಿತು. ಶ್ರೀದೇವಿ ಸಂಸ್ಥೆಯ ಕ್ಯಾಲೆಂಡರನ್ನು ಬಿಡುಗಡೆ ಮಾಡಲಾಯಿತು. ಪ್ರಾರಂಭದಲ್ಲಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ.ಎಲ್. ಹರೇಂದ್ರ ಕುಮಾರ್ ಅವರು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್‌ರವರು ವಂದನಾರ್ಪಣೆ ಮಾಡಿದರು. ಡಾ. ಆರ್. ಅಶಿತಾ ಮತ್ತು ಪ್ರೊ. ಮರ್ಲಿನ್ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

## ನೆನಪಿನಲ್ಲಿಡಬೇಕಾದ ಮಾತು



"ಬುದ್ಧನಂತೂ ಯಾವ ಸಹಸ್ರಮಾನವನ್ನೂ ಮೀರಿದವನು. ಈಗಷ್ಟೇ ಕಳೆದುಹೋದ ಸಹಸ್ರಮಾನದ ಕ್ರಿಸ್ತನ ದೇಹದ ದಯೆಯ ರಕ್ತ ಈ ಭೂಮಿಗೆ ಬಿದ್ದು ಎರಡು ಸಾವಿರ ವರ್ಷಗಳು ಆದವಂತೆ. ರಕ್ತ ಭೂಮಿಗೆ ಚೀಲದಿರುವುದು ಅಂದಿಗಿಂತಲೂ ಇಂದಿಗೆ ಹೆಚ್ಚು ಬೇಕಾಗಿದೆ. ಕ್ರಿಸ್ತ ಮತ್ತು ದಯೆಗಾಗಿ ಭೂಮಿ ಒಣಗಿ ನಿಂತಿದೆ

**ದೇವನೂರ ಮಹಾದೇವ**
ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕನ್ನಡ ಲೇಖಕರು, (ಎದೆಗೆ ಬಿದ್ದ ಅಕ್ಷರ-ಕೃತಿಯಿಂದ)

# ಗುಣಮಟ್ಟದ ಶಿಕ್ಷಣಕ್ಕೆ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ ಮಾದರಿ




▶▶ ಮೊದಲನೇ ಪುಟದಿಂದ

ಅದೇ ರೀತಿ ಕುಟುಂಬದ ಸದಸ್ಯರು ಅವರಿಗೆ ಬೆಂಬಲವಾಗಿ ನಿಂತು ಸಂಸ್ಥೆಯನ್ನು ಕಟ್ಟಿ ಬೆಳೆಸುವಲ್ಲಿ ಪರಿಶ್ರಮ ಹಾಕಿದ್ದಾರೆ. ಒಡೆದ ಕನ್ನಡಿಯಲ್ಲಿ ಏನನ್ನು ನೋಡಲಿಕ್ಕೆ ಸಾಧ್ಯವಿಲ್ಲ. ಶುದ್ಧವಾದ ಕನ್ನಡಿಯಲ್ಲಿ ಸಮಾಜದ ಒಳಿತನ್ನು ಕಾಣಬಹುದಾಗಿದೆ. ಡಾ.ಹುಲಿನಾಯ್ಕರ್ ಅವರ ಕುಟುಂಬ ಎಲ್ಲರಿಗೂ ಆದರ್ಶಪ್ರಾಯವಾದದ್ದು.

### ಸ್ಕಿಲ್‌ಲ್ಯಾಬ್ ಉದ್ಘಾಟನೆ

ಇದೇ ಸಂದರ್ಭದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿ ನೂತನವಾಗಿ ನಿರ್ಮಿಸಲಾದ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಎಂಬ ಸ್ಕಿಲ್‌ಲ್ಯಾಬ್ ಅನ್ನು ರಾಜ್ಯಪಾಲರಾದ ಸಿ.ಹೆಚ್. ವಿಜಯಶಂಕರ್ ಅವರು ಉದ್ಘಾಟಿಸಿದರು. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಡೇಟಾ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ.ಎಲ್. ಗಿರೀಶ್ ಪ್ರಯೋಗಾಲಯದ ಉಪಯೋಗಗಳನ್ನು ವಿದ್ಯಾರ್ಥಿಗಳು ಪಡೆದುಕೊಂಡು ಹೇಗೆ ಭವಿಷ್ಯ ರೂಪಿಸಿಕೊಳ್ಳಬಹುದು ಎಂಬುದನ್ನು ಚುಟುಕಾಗಿ ವಿವರಿಸಿದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಮಾತನಾಡುತ್ತಾ "1986ರಲ್ಲಿ ಶ್ರೀದೇವಿ ಎನ್ನುವ ಚಿಕ್ಕ ನರ್ಸಿಂಗ್ ಹೋಂನಿಂದ ಆರಂಭಿಸಿ, ಇಂದು ಇಂಜಿನಿಯರಿಂಗ್, ಮೆಡಿಕಲ್ ಕಾಲೇಜು ಸೇರಿದಂತೆ ಅನೇಕ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಪ್ರಸ್ತುತ ಸುಮಾರು ಹತ್ತು ಸಾವಿರ ವಿದ್ಯಾರ್ಥಿಗಳು ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ಕಲಿಯುತ್ತಿದ್ದಾರೆ. ಮೂರುಸಾವಿರ ಸಿಬ್ಬಂದಿ ಸಂಸ್ಥೆಯ ಉನ್ನತಿಗಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಆಸ್ಪತ್ರೆ ಮತ್ತು ನಮ್ಮ ಶಿಕ್ಷಣ ಸಂಸ್ಥೆಗಳು ಉತ್ತಮವಾಗಿ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತಿರುವುದಕ್ಕೆ ಸಿಬ್ಬಂದಿಯ ಅರ್ಪಣಾ ಮನೋಭಾವವೇ ಕಾರಣ. ಹೀಗಾಗಿ ಸಂಸ್ಥೆಯ ಏಳಿಗೆಯಲ್ಲಿ ಅವರ ಪಾತ್ರ ಬಹಳ ಮುಖ್ಯವಾಗಿದೆ.

"ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಿಂದಲೂ ನಮ್ಮ ಸಂಸ್ಥೆಗಳಿಗೆ ಮಾನ್ಯತೆ ಮತ್ತು ಪ್ರಶಂಸೆ ದೊರೆಯುತ್ತಿದೆ.

'ಕೆರೆಯ ನೀರನ್ನು ಕರೆಗೆ ಚೆಲ್ಲಿ' ಎಂಬ ಗಾದೆ ಮಾತಿನಂತೆ ಈ ವರ್ಷದಿಂದ ಉಚಿತ ಶಿಕ್ಷಣ ನೀಡಲು ಶಿಷ್ಯವೇತನ ಯೋಜನೆ ಆರಂಭಿಸಲಾಗಿದೆ. ಎಲ್ಲಾ ತರಗತಿಗಳಲ್ಲಿ ಅಂದರೆ ಇಂಜಿನಿಯರಿಂಗ್ ಮೆಡಿಕಲ್, ಫಾರ್ಮಸಿ, ಡಿಪ್ಲೋಮಾ, ಐ.ಟಿ.ಐ. ಪದವಿ, ಕಾಲೇಜಿನ ದ್ವಿತೀಯ ವರ್ಷದ ಒಬ್ಬ ವಿದ್ಯಾರ್ಥಿ– ಒಬ್ಬ ವಿದ್ಯಾರ್ಥಿನಿಗೆ ಉಚಿತ ಶಿಕ್ಷಣ ನೀಡಲಾಗುವುದು.

"ಜನರ ಪ್ರೀತಿ ವಿಶ್ವಾಸಗಳಿಸಿದರೆ ಯಾವ ಮಟ್ಟಕ್ಕೆ ಹೋಗಬಹುದು ಎಂಬುದಕ್ಕೆ ಗೌರವಾನ್ವಿತ ರಾಜ್ಯಪಾಲರಾದ ಸಿ. ಎಚ್.ವಿಜಯಶಂಕರ್ ಅವರು ಉದಾಹರಣೆಯಾಗಿದ್ದಾರೆ. ಅವರ ಪ್ರೇರಣಾದಾಯಕ ವ್ಯಕ್ತಿತ್ವ ನಮ್ಮೆಲ್ಲರಿಗೂ ಸ್ಫೂರ್ತಿ ನೀಡುವಂತಹುದು. ನಾನು ವಿಧಾನ ಪರಿಷತ್ತಿನ ಸದಸ್ಯನಾಗಿದ್ದರಿಂದಲೂ ಅವರ ಕಾರ್ಯಚಟುವಟಿಕೆಗಳನ್ನು ಗಮನಿದ್ದೇನೆ. ಸಮಾಜಮುಖಿ ಚಿಂತನೆ, ಜನಪರ ಕಾರ್ಯಚಟುವಟಿಕೆಗಳು ಶ್ರೀಯುತರನ್ನು ಎತ್ತರದ ಸ್ಥಾನಕ್ಕೆ ಕರೆದುಕೊಂಡು ಹೋಗಿವೆ.

"ಹಾವೇರಿ ಜಿಲ್ಲೆ ರಾಣೆಬೆನ್ನೂರಿನಲ್ಲಿ ಜನಿಸಿ ಮೈಸೂರಿನಲ್ಲಿ ಅದು ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ಗೆದ್ದು ಲೋಕಸಭಾ ಸದಸ್ಯರಾಗಿ ಕೆಲಸ ನಿರ್ವಹಿಸಿರುವುದು ಸಾಮಾನ್ಯ ಸಂಗತಿಯಲ್ಲ. ಹುಣಸೂರು ಎಂಬ ಅರಸು ನಾಡಿನಲ್ಲೂ ಅವರು ಜನಾನುರಾಗಿ, ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದು ಜನಪರ ಸಮಾಜಮುಖಿ ಕಾಳಜಿಗೆ ಜೀವಂತ ಸಾಕ್ಷಿಯಾಗಿದೆ" ಎಂದರು.

ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ನರೇಂದ್ರ ವಿಶ್ವನಾಥ್ ಅವರು ಹುಲಿನಾಯ್ಕರ್ ಅವರು ಬೆಳೆದು ಬಂದ ದಾರಿ ಮತ್ತು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಜನ ಮುಖಿಯನ್ನಾಗಿ ಮಾಡುವಲ್ಲಿ ಪಟ್ಟಪರಿಶ್ರಮ, ವಹಿಸಿದ ಪಾತ್ರ ಹಾಗೂ ಸಿ. ಹೆಚ್. ವಿಜಯಶಂಕರ್, ವಿಧಾನಸಭಾಸದಸ್ಯರಾಗಿ, ವಿಧಾನಪರಿಷತ್ತಿನ ಸದಸ್ಯರಾಗಿ ಹಾಗೂ ಲೋಕಸಭಾ ಸದಸ್ಯರಾಗಿ ರಾಜ್ಯಪಾಲರ ಹುದ್ದೆವರೆಗೆ ಬೆಳೆದು ಬಂದ ಪರಿಯನ್ನು ಚಿಕ್ಕದಾಗಿ ಚೊಕ್ಕದಾಗಿ ಕಟ್ಟಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ವೈದ್ಯಕೀಯ ನಿರ್ದೇಶಕ ಡಾ. ರಮಣ್ ಆರ್ ಹುಲಿನಾಯ್ಕರ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್ನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಶ್ರೀದೇವಿ ಆಸ್ಪತ್ರೆಯ ನೇತ್ರ ತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ಚಾರಿಟೇಬಲ್ ಟ್ರಸ್ಟಿ ಅಂಬಿಕಾ ಎಂ ಹುಲಿನಾಯ್ಕರ್ ಭಾಗಿಯಾಗಿದ್ದರು.

## ಪ್ರಧಾನಿ ಹೇಳಿದ ಕಿವಿಮಾತು



ಮೇಘಾಲಯ ಅದಿವಾಸಿಗಳ ನಾಡು, ಅಲ್ಲಿನ ಜನರ ಬದುಕನ್ನು ಉತ್ತಮ ಪಡಿಸಲು ಸತತ ಪ್ರಯತ್ನ ಮಾಡಿ. ರಾಜ್ಯಭವನದಲ್ಲಿ ಕುಳಿತು ಸಮಯ ಕಳೆಯಬೇಡಿ. ಜನರೊಂದಿಗೆ ಬೆರೆಯಿರಿ. ಹಳ್ಳಿಗಳಿಗೆ ಭೇಟಿ ನೀಡಿ. ಅವರ ಆಚಾರ ವಿಚಾರಧಾರೆಗಳು, ತಲೆತಲಾಂತರದಿಂದ ನಡೆದುಕೊಂಡು ಬಂದಿರುವ ಸಂಪ್ರದಾಯಗಳನ್ನು ಅಧ್ಯಯನ ಮಾಡಿ. ರಾಜಭವನವನ್ನು ಜನರ ಭವನವನ್ನಾಗಿಸಿ. ನೀವು ಕಾಮನ್‌ಮ್ಯಾನ್ ರಾಜ್ಯಪಾಲನಾಗಿ ಕೆಲಸ ಮಾಡಬೇಕು ಎಂದು ಪ್ರಧಾನಿ ನರೇಂದ್ರಮೋದಿ ಅವರು ಕಿವಿಮಾತು ಹೇಳಿದ್ದರು. ಅವರ ಅಣತಿಯಂತೆ ನಡೆಯುತ್ತಿದ್ದೇನೆ. ರಾಜಭವನ ಜನರ ಭವನವಾಗಿದೆ. ಯಾರು ಬೇಕಾದರೂ ಅನುಮತಿ ಇಲ್ಲದೆ ಬರಬಹುದಾಗಿದೆ.

ದೇಶದ ಅಭಿವೃದ್ಧಿಗಾಗಿ ಪ್ರಧಾನ ಮೋದಿ ಅವರು 16–18 ಗಂಟೆ ಕೆಲಸ ಮಾಡುತ್ತಿದ್ದಾರೆ. ಬದುಕು, ಭವಿಷ್ಯ ಕಟ್ಟಿಕೊಳ್ಳುವ ಜನರಿಗೆ ಮತ್ತು ಸಮುದಾಯಕ್ಕೆ ಅವರು ಮಾದರಿಯಾಗಿದ್ದಾರೆ.

ಮೇಘಾಲಯ ಅಮೂಲ್ಯ ಗಿಡಮೂಲಿಕೆಗಳನ್ನು ಹೊಂದಿರುವ ಸಸ್ಯ ಸಂಪತ್ತಿನ ರಾಜ್ಯವಾಗಿದೆ. ರಾಜಭವನದ ಬಾಗಿಲು ಕನ್ನಡಿಗರಿಗೆ ಸದಾ ಕಾಲ ತೆರೆದಿರುತ್ತದೆ. ನೀವು ಯಾವಾಗ ಬೇಕಾದರೂ ಅನುಮತಿ ಪಡೆಯದೆ ರಾಜಭವನಕ್ಕೆ ಬರಬಹುದು. ವಿಭಿನ್ನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಮೇಘಾಲಯ ಪ್ರವಾಸೋದ್ಯಮದ ಮೆಚ್ಚಿನ ತಾಣವಾಗಿದೆ. ದೇಶದಲ್ಲಿ ಅತಿ ಹೆಚ್ಚು ಮಳೆ ಬೀಳುವ ಸ್ಕಿಲ್‌ಲ್ಯಾಬ್ ಚಿರಾಪುಂಚಿ ಮೇಘಾಲಯದಲ್ಲಿದೆ. ಅನೇಕ ಪ್ರೇಕ್ಷಣೀಯ ಸ್ಥಳಗಳಿಂದ ಶೋಭೆ ಹೆಚ್ಚಿಸಿಕೊಂಡಿದೆ ಎಂದು ಅಭಿಪ್ರಾಯಪಟ್ಟ ಮೇಘಾಲಯದ ರಾಜ್ಯಪಾಲರಾದ ಸಿ.ಹೆಚ್. ವಿಜಯಶಂಕರ್ ಅವರು ಮೇಘಾಲಯಕ್ಕೆ ಬರುವಂತೆ ಕನ್ನಡಿಗರಿಗೆ ಕರೆಕೊಟ್ಟರು.

"ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ, ಲಕ್ಷಾಂತರ ವಿದ್ಯಾರ್ಥಿಗಳ ಪಾಲಿಗೆ ಬೆಳಕಾಗಿದೆ. ನನ್ನಂತಹ ವಿದ್ಯಾರ್ಥಿಯನ್ನು ಗುರುತಿಸಿ ಸ್ಕಾಲರ್ ಶಿಪ್ ನೀಡಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿರುವುದು ಡಾ. ಹುಲಿನಾಯ್ಕರ್ ಅವರ ದೊಡ್ಡ ಗುಣ. ಇದಕ್ಕಾಗಿ ನಾನು ಸಂಸ್ಥೆಗೆ ಮತ್ತು ಅವರ ಕುಟುಂಬಕ್ಕೆ ಆಭಾರಿಯಾಗಿದ್ದೇನೆ. ಸಂಸ್ಥೆಯ ಕೀರ್ತಿ ಗೌರವ ಹೆಚ್ಚಿಸಲು ನನ್ನೆಲ್ಲ ಶಕ್ತಿ ಧಾರೆ ಎರೆಯುತ್ತೇನೆ.

– ವಿನಯ್
ಮೊದಲ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ

"ಅಹಲ್ಯಲ್ಯಾಬಾಯಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ವಿದ್ಯಾರ್ಥಿನಿ ಶಿಷ್ಯ ವೇತನಕ್ಕಾಗಿ ಆಯ್ಕೆ ಮಾಡಿರುವುದಕ್ಕೆ ಸಂಸ್ಥೆಗೆ ಮತ್ತು ಹುಲಿನಾಯ್ಕರ್ ಕುಟುಂಬಕ್ಕೆ ಆಭಾರಿಯಾಗಿದ್ದೇನೆ. ಸಂಸ್ಥೆ ನನ್ನ ಮೇಲೆ ಇಟ್ಟಿರುವ ನಂಬಿಕೆ ವಿಶ್ವಾಸ ಉಳಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸಾವಿರಾರು ವಿದ್ಯಾರ್ಥಿಗಳು ಬದುಕು ಭವಿಷ್ಯ ಕಟ್ಟಿಕೊಂಡಿದ್ದಾರೆ. ಅದರಲ್ಲಿ ನಾನು ಒಬ್ಬಳಾಗಿದ್ದೇನೆ ಎಂಬುದೇ ನನ್ನ ಪಾಲಿನ ಸೌಭಾಗ್ಯ.

– ಕೀರ್ತನ
ಮೊದಲ ವರ್ಷದ ಫಿಜಿಯೋಥೆರಪಿ ವಿದ್ಯಾರ್ಥಿ

ರಾಜ್ಯಪಾಲರು ಸಾಂಕೇತಿಕವಾಗಿ ಇಬ್ಬರಿಗೂ ವಿದ್ಯಾರ್ಥಿ ವೇತನವನ್ನು ನೀಡಿದರು. ಉಳಿದ ಎಲ್ಲರಿಗೂ ಸಂಸ್ಥೆಯ ಅಧ್ಯಕ್ಷರು ವಿದ್ಯಾರ್ಥಿವೇತನವನ್ನು ನೀಡಿದರು.

# ಮೂಳೆದಾನ - ಅಪರೂಪದಲ್ಲಿ ಅಪರೂಪ!

▪ ಬಿ.ಎಸ್. ವೆಂಕಟೇಶ ಪ್ರಸಾದ್
ಹಿರಿಯ ಪತ್ರಕರ್ತರು

ಕಳೆದ ಡಿಸೆಂಬರ್ 23ರಂದು ಇಡೀ ರಾಜ್ಯದ ಗಮನ ಸೆಳೆಯುವ ವಿದ್ಯಮಾನವೊಂದು ವರದಿಯಾಯಿತು. ರಸ್ತೆ ಅಪಘಾತದಲ್ಲಿ ತಲೆಗೆ ಪೆಟ್ಟು ಬಿದ್ದು ಮಿದುಳುನಿಷ್ಕ್ರಿಯ ಸ್ಥಿತಿಯಲ್ಲಿದ್ದ ಕೊಡಗಿನ ಸೋಮವಾರಪೇಟೆ ತಾಲ್ಲೂಕು ಮಾದಾಪುರ ಸಮೀಪದ 33 ವರ್ಷದ ಯುವಕ ಈಶ್ವರ ಅವರ ದೇಹದ ಮೂಳೆಗಳನ್ನು ಅವರ ಕುಟುಂಬದವರು ಮಂಗಳೂರಿನಲ್ಲಿರುವ ಜಸ್ಟೀಸ್ ಕೆ.ಎಸ್. ಹೆಗ್ಡೆ ಚಾರಿಟಬಲ್ ಆಸ್ಪತ್ರೆಗೆ ದಾನ ಮಾಡಿದ್ದು ಇಡೀ ನಾಡಿನಲ್ಲಿ ಸುದ್ದಿಯಾದ ಘಟನೆಯಾಯಿತು. ಇದು ರಾಜ್ಯದಲ್ಲಿ ನಡೆದ ಮೊತ್ತಮೊದಲ ಜೀವಂತ ಮೂಳೆಯ ದಾನದ ಪ್ರಕಿಯೆ.

ನಮ್ಮಲ್ಲಿ ಕಣ್ಣಿನ ದಾನದ ಬಗ್ಗೆ ಬಹುತೇಕ ಎಲ್ಲರಿಗೂ ಅರಿವಿದೆ. ಅದೇ ರೀತಿ, ಇತರ ಅಂಗಾಂಗದಾನ, ಅಂದರೆ, ಮೂತ್ರಪಿಂಡ, ಯಕೃತ್ತು, ಹೃದಯ, ಚರ್ಮ ಇವುಗಳ ದಾನದ ಬಗ್ಗೆಯೂ ಸ್ವಲ್ಪಮಟ್ಟಿಗೆ ತಿಳಿವಳಿಕೆ ಇದೆ. ಆದರೆ ಮೂಳೆಯ ದಾನದ ಬಗ್ಗೆ ಗೊತ್ತಿರುವವರು ತೀರಾ ವಿರಳ ಎನ್ನಬಹುದು.

ಮೂಳೆಯ ದಾನದಲ್ಲಿ ಎರಡು ರೀತಿಗಳಿವೆ. ಮೊದಲನೆಯದಾಗಿ, ಜೀವವಿರದ ಮೂಳೆಯ ದಾನ (ಡೆಡ್ ಬೋನ್ ಡೊನೇಷನ್); ಸಾಮಾನ್ಯ. ವ್ಯಕ್ತಿಗಳ ಮಂಡಿಚಿಪ್ಪು ಬದಲಾವಣೆ, ಸೊಂಟದ ಮೂಳೆಯ ಶಸ್ತ್ರಚಿಕಿತ್ಸೆ ಮುಂತಾದ ಸಂದರ್ಭಗಳಲ್ಲಿ ಹೊರತೆಗೆಯುವ ಮೂಳೆಗಳು ಈ ಗುಂಪಿಗೆ ಸೇರುತ್ತವೆ. ಇದಕ್ಕೆ ವೈದ್ಯಕೀಯ ಪರಿಭಾಷೆಯಲ್ಲಿ ಸರ್ಜಿಕಲ್ ಬೋನ್ ವೇಸ್ಟ್ ಎನ್ನಲಾಗುತ್ತದೆ. ಹೀಗೆ ಹೊರ ತೆಗೆದ ಮೂಳೆಗಳನ್ನು ಬೋನ್‌ಗ್ರ್ಯಾಫ್ಟಿಂಗ್, ಡೆಂಟಲ್ ಇಂಪ್ಲ್ಯಾಂಟ್ ಮತ್ತಿತರ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದು ಮುಂಚಿನಿಂದಲೂ ರೂಢಿಯಲ್ಲಿದೆ.

ಎರಡನೆಯದು, ಜೀವಂತ ಮೂಳೆಯ ದಾನ. ಯಾವುದೇ ವ್ಯಕ್ತಿಯು ಮರಣ ಹೊಂದಿದ ಸುಮಾರು ನಾಲ್ಕು ಗಂಟೆಗಳವರೆಗೆ ಮಾತ್ರ ದೇಹದ ಮೂಳೆಗಳಲ್ಲಿ ಜೀವವಿರುತ್ತದೆ. ಹೀಗಾಗಿ, ಆ ಅವಧಿಯೊಳಗೆ ಮೃತಶರೀರದಿಂದ ಮೂಳೆಯನ್ನು ಹೊರತೆಗೆದರೆ ಮಾತ್ರ ಅದಕ್ಕೆ ಜೀವಂತಮೂಳೆ ಎನ್ನಲಾಗುತ್ತದೆ. ಸಾವಿಗೀಡಾದ ವ್ಯಕ್ತಿಯ ದೇಹದಿಂದ ಮೂಳೆಯನ್ನು ಹೊರತೆಗೆಯಲು ಶಸ್ತ್ರಚಿಕಿತ್ಸೆ ನಡೆಸಬೇಕಾಗುತ್ತದೆ. ಇದಕ್ಕೆ ಸ್ವಲ್ಪ ಹೆಚ್ಚು ಸಮಯ, ಅಂದರೆ ಮೂರು ಗಂಟೆಗಳಷ್ಟು ಅವಧಿ ಬೇಕಾಗಬಹುದು.
ಹೀಗೆ, ದೇಹದಿಂದ ಮೂಳೆಗಳನ್ನು ಹೊರ ತೆಗೆಯುತ್ತಿದ್ದಂತೆಯೇ ತೆಗೆದ ಮೂಳೆಗಳ ಜಾಗಕ್ಕೆ ಅದೇ ರೀತಿಯ ಕೃತಕಮೂಳೆಗಳನ್ನು ಕೂರಿಸಿ ಶಸ್ತ್ರಚಿಕಿತ್ಸೆಯನ್ನೂ ಮಾಡಬೇಕಾಗುತ್ತದೆ. ಜೊತೆಗೆ, ಮೂಳೆಗಳನ್ನು ಹೊರತೆಗೆಯುತ್ತಿದ್ದಂತೆಯೇ ಅವನ್ನು ಸೂಕ್ತವಾಗಿ ಸಂಸ್ಕರಿಸಿ ಕೂಡಲೇ ಬೇಕಾಗುತ್ತದೆ. ಈ ಮೂಳೆಗಳನ್ನು ಮೈನಸ್ 80ಡಿಗ್ರಿಯ ಶೀತಲವ್ಯವಸ್ಥೆಯಲ್ಲಿ ಇರಿಸಬೇಕಾಗುತ್ತದೆ. ಇಲ್ಲದಿದ್ದರೆ, ಮೂಳೆಯಲ್ಲಿನ ಜೀವನಾಶವಾಗಿ ಹೋಗುತ್ತದೆ. ಹೀಗಾದರೆ, ಅದನ್ನು ಬಳಸಬೇಕಾದ ಉದ್ದೇಶ ಕೈಗೂಡದೇ ಹೋಗುತ್ತದೆ.

ನೇತ್ರದಾನ, ಕಿಡ್ನಿಯ ದಾನ ಲಿವರ್‌ನ ದಾನ ಮತ್ತು ಹೃದಯದಾನಗಳ ಬಗ್ಗೆ ನಾವು ಆಗಾಗ ಕೇಳುತ್ತಿರುತ್ತೇವೆ. ದಾನಿಗಳು ನೀಡಿದ ಅಂಗಾಂಗಗಳನ್ನು ರಸ್ತೆಯಲ್ಲಿ 'ಜೀರೊಟ್ರ್ಯಾಫಿಕ್' ಮೂಲಕ ಅಥವಾ ಹೆಲಿಕಾಪ್ಟರಿನ ಮೂಲಕ ಶೀಘ್ರವೇ ಸಾಗಿಸಿ ಅವುಗಳನ್ನು ಅಗತ್ಯವಿರುವ ಬೇರೊಬ್ಬ ವ್ಯಕ್ತಿಗೆ ಕಸಿಮಾಡಿದ ಸುದ್ದಿಗಳು ಆಗಾಗ ವರದಿಯಾಗುತ್ತಿರುತ್ತವೆ. ಆದರೆ, ಮೂಳೆಯ ದಾನವೆಂಬುದು ಬಹುಮಟ್ಟಿಗೆ ಅಪರಿಚಿತ ಎಂದೇ ಹೇಳಬೇಕು. ಏಕೆ ಹೀಗೆ? ಈ ಪ್ರಶ್ನೆಗೆ ಉತ್ತರ ಕೆದಕಿದರೆ, ದೇಹದ ಮೂಳೆಯ ದಾನ ಮಾಡಲು ಜನರು ಮುಂದಾಗದಿರುವುದು, ಅರಿವಿನ ಕೊರತೆ ಹಾಗೂ ಅದಕ್ಕೆ ಕೆಲವು ತೊಡಕುಗಳು ಇದಕ್ಕೆ ಮುಖ್ಯಕಾರಣ ಎಂಬುದು ಗೊತ್ತಾಗುತ್ತದೆ.

ಆದರೆ, ವಾಸ್ತವವೇನೆಂದರೆ ಮೃತವ್ಯಕ್ತಿಯ ದೇಹವನ್ನು ಆಕಾರಗೆಟ್ಟಸ್ಥಿತಿಯಲ್ಲಿ ಕೊಡಬಾರದೆಂಬ ಕಾರಣಕ್ಕಾಗಿಯೇ ಜೀವಂತ ಮೂಳೆಯದಾನದ ಸಂದರ್ಭದಲ್ಲಿ ವೈದ್ಯರು ಮೃತಶರೀರಕ್ಕೆ ಕೃತಕಮೂಳೆಗಳನ್ನು ಜೋಡಿಸಿ ಆ ದೇಹಕ್ಕೆ ಮೂಲರೂಪವನ್ನು ನೀಡಿ ಅನಂತರವೇ ಸಂಬಂಧಿಸಿದವರಿಗೆ ಹಿಂದಿರುಗಿಸುತ್ತಾರೆ. "ಹೀಗೆ, ಕೃತಕ ಮೂಳೆಗಳನ್ನು ಕೂರಿಸಿರುವುದರಿಂದ ದೇಹವು ಶೇಕಡ 100ರಷ್ಟು ಅಲ್ಲದಿದ್ದರೂ ಸರಿಸುಮಾರು ಮೊದಲನೆಯ ಆಕಾರವನ್ನೇ ಹೊಂದಿರುತ್ತದೆ" ಎನ್ನುತ್ತಾರೆ ಕೆ.ಎಸ್.ಹೆಗ್ಡೆ ಆಸ್ಪತ್ರೆಯ ಎಲುಬು ಮತ್ತು ಕೀಲು ತಜ್ಞರ ವಿಭಾಗದ ಮುಖ್ಯಸ್ಥರಾದ ಡಾ. ವಿಕ್ರಮ್ ಶೆಟ್ಟಿ ಅವರು.

ಲಿವರ್, ಕಿಡ್ನಿ, ಹೃದಯ ಇತ್ಯಾದಿ ಅಂಗಗಳನ್ನು ಮೃತದೇಹದಿಂದ ಹೊರತೆಗೆದ ಮೇಲೆ ಕೆಲವೇ ಗಂಟೆಗಳೊಳಗೆ ಬೇರೊಬ್ಬ ವ್ಯಕ್ತಿಗೆ ಕಸಿಮಾಡಲಾಗುತ್ತದೆ. ಆದರೆ. ದಾನ ಪಡೆದ ಜೀವಂತ ಮೂಳೆಗಳನ್ನು ಹೀಗೆ ತಕ್ಷಣವೇ ಬೇರೊಬ್ಬ ವ್ಯಕ್ತಿಗೆ ಏಕಾಯೇಕಿ ಜೋಡಿಸಲಾಗುವುದಿಲ್ಲ. ಸಂಗ್ರಹಿಸಲಾದ ಮೂಳೆಗಳ ಹಾಗೂ ದಾನಪಡೆಯುವವರ ಮೂಳೆಗಳ ಅಳತೆ, ಗಾತ್ರ ಇವೆಲ್ಲವನ್ನೂ ಸೂಕ್ತವಾಗಿ ಪರಿಶೀಲಿಸಿದ ಮೇಲಷ್ಟೇ ಅವುಗಳನ್ನು ಯಾವ ವ್ಯಕ್ತಿಗೆ ಜೋಡಿಸಬೇಕು ಎನ್ನುವುದನ್ನು ನಿರ್ಧರಿಸಬೇಕಾಗುತ್ತದೆ. ಹೀಗಾಗಿ, ಇದು ಸಾಕಷ್ಟು ಸಮಯ ಹಿಡಿಯುವ ಪ್ರಕ್ರಿಯೆಯಾಗಿರುತ್ತದೆ. ಇದೇ ಕಾರಣಕ್ಕಾಗಿ, ಹೊರತೆಗೆದ ಮೂಳೆಗಳನ್ನು ಮೂರುವರ್ಷಗಳವರೆಗೂ ಸಂರಕ್ಷಿಸಬೇಕಾಗಿ ಬರುತ್ತದೆ ಎಂಬುದು ವೈದ್ಯರಾದ ಡಾ. ವಿಕ್ರಮ್ ಶೆಟ್ಟಿ ಅವರ ವಿವರಣೆ.

### ದಾನಪಡೆದ ಮೂಳೆಗಳ ಸಂರಕ್ಷಣೆಯು ದುಬಾರಿ ಬಾಬತ್ತೂ ಹೌದು.

ಇದಕ್ಕೆ ಬೇಕಾಗುವ ಶೀತಲೀಕರಣ ಉಪಕರಣಕ್ಕೆ ಕನಿಷ್ಠ 80ಲಕ್ಷ ರೂಪಾಯಿ ಹೂಡಿಕೆ ಮಾಡಬೇಕಾಗುತ್ತದೆ. ಇನ್ನು, ಆ ಉಪಕರಣ ವ್ಯವಸ್ಥೆಯ ದೈನಂದಿನ ನಿರ್ವಹಣಾ ವೆಚ್ಚಗಳು ಕೂಡ ಇರುತ್ತವೆ. ಮೂಳೆಯ ದಾನಕ್ಕೆ ಮುಂದಾಗುವವರೇ ಇಲ್ಲದಿರುವ ಪರಿಸ್ಥಿತಿಯಲ್ಲಿ ಇಷ್ಟು ಬಂಡವಾಳವನ್ನು ವಿನಿಯೋಗಿಸಲು ಮುಂದೆ ಬರುವವರು ಬಹಳ ಕಡಮೆ. ಹೀಗಾಗಿಯೇ, ರಾಜ್ಯದಲ್ಲಿ ಜೀವಂತ ಮೂಳೆಗಳನ್ನು ಸಂಗ್ರಹಿಸುವ ವ್ಯವಸ್ಥೆ (ಟಿಷ್ಯೂಬ್ಯಾಂಕ್) ಎರಡು ಅಥವಾ ಮೂರುಕಡೆಗಳಲ್ಲಿ ಮಾತ್ರ. ಈ ಪೈಕಿ ಒಂದು ಮಂಗಳೂರಿನ ದೇರಳಕಟ್ಟೆಯ ಜಸ್ಟೀಸ್ ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿದ್ದರೆ, ಉಳಿದ ಎರಡು ಬೆಂಗಳೂರಿನಲ್ಲಿವೆ (ಬೆಂಗಳೂರಿನಲ್ಲಿರುವ ಎರಡರಪೈಕಿ ಒಂದುಟಿಷ್ಯೂ ಬ್ಯಾಂಕ್ ಈಗ ಕಾರ್ಯಾಚರಣೆ ಮಾಡುತ್ತಿಲ್ಲ ಎಂದು ತಿಳಿದುಬಂದಿದೆ).

ಜೀವಂತ ಮೂಳೆಯ ದಾನದಿಂದ ಹಲವು ಪ್ರಯೋಜನಗಳಿವೆ. ಒಬ್ಬ ವ್ಯಕ್ತಿಯಿಂದ ಪಡೆದ ಮೂಳೆಗಳನ್ನು ಐದಕ್ಕಿಂತ ಹೆಚ್ಚು ಜನರಿಗೆ ಬಳಸಲು ಸಾಧ್ಯವಾಗುತ್ತದೆ. ಪ್ರಮುಖವಾಗಿ, ಮೂಳೆಯ ಕ್ಯಾನ್ಸರ್‌ನಿಂದ ಪೀಡಿತರಾದವರಿಗೆ ಇದನ್ನು ಜೋಡಿಸಬಹುದು. ಅದರಲ್ಲಿಯೂ ಮೂಳೆಯ ಕ್ಯಾನ್ಸರ್‌ನಿಂದ ಬಾಧಿತರಾಗಿರುವ ಮಕ್ಕಳಿಗೆ ಇದರಿಂದ ಅತ್ಯಂತ ಹೆಚ್ಚಿನ ಉಪಯೋಗವಾಗುತ್ತದೆ. ನಡೆಯಲಾಗದ ಮಕ್ಕಳು ನಡೆಯುವ ಸಾಮರ್ಥ್ಯವನ್ನು ಪಡೆಯಲು ಇದರಿಂದ ಅನುಕೂಲವಾಗುತ್ತದೆ ಎಂಬುದು ವೈದ್ಯರ ಅಭಿಪ್ರಾಯ. ಶಸ್ತ್ರಚಿಕಿತ್ಸೆಯ ಭಾಗವಾಗಿ ಬಾಧಿತ ವ್ಯಕ್ತಿಯ ಮೂಳೆಯನ್ನು ಒಳಗೊಂಡ ದೇಹದ ಯಾವುದೇ ಭಾಗವನ್ನು ಕತ್ತರಿಸಬೇಕಾದಾಗ, ಅಸ್ಥಿರಂಧ್ರತೆಯಿಂದಾಗಿ (ಆಸ್ಟಿಯೊಪೊರೋಸಿಸ್) ಟೊಳ್ಳಾದ ಮೂಳೆಗಳನ್ನು ಬದಲಿಸಬೇಕಾದಾಗ, ಮೂಳೆಗಳ ಪುನಶ್ಚೇತನ ಮಾಡಬೇಕಾದ ಸಂದರ್ಭಗಳಲ್ಲಿ ಕೂಡ ಜೀವಂತ ಮೂಳೆಗಳು ಪ್ರಯೋಜನಕಾರಿಯಾಗುತ್ತವೆ.

ಪ್ರಸ್ತುತ, ರಾಜ್ಯದಲ್ಲಿ ಬೆಂಗಳೂರು ಮತ್ತು ಮಂಗಳೂರಿನಲ್ಲಿ ಮಾತ್ರ ಟಿಷ್ಯೂಬ್ಯಾಂಕ್ ಇರುವುದರಿಂದ ಯಾರಾದರೂ ಮೂಳೆದಾನ ಮಾಡುವ ಉದ್ದೇಶವನ್ನು ಹೊಂದಿದ್ದರೂ, ಅದು ಅಷ್ಟು ಸಲೀಸಿನ ಕಾರ್ಯವಲ್ಲ. ಮೊದಲಿಗೆ, ಅದು ಹೆಚ್ಚೆಂದರೆ ವ್ಯಕ್ತಿಯು ಮೃತಪಟ್ಟ ನಾಲ್ಕುಗಂಟೆಗಳ ಅವಧಿಯೊಳಗೆ ಮುಗಿಸಬೇಕಾದ ಪ್ರಕ್ರಿಯೆಯಾಗಿದೆ. ಇಲ್ಲಿ, ದೇಹದಿಂದ ಮೂಳೆ ಹೊರತೆಗೆಯುವುದರಿಂದಷ್ಟೇ ಉದ್ದೇಶ ನೆರವೇರುವುದಿಲ್ಲ. ಮೂಳೆಗಳನ್ನು ಹೊರತೆಗೆದ ತಕ್ಷಣವೇ ಅತಿ–ಶೀತಲವ್ಯವಸ್ಥೆಯಲ್ಲಿ ಅದರ ಸಂರಕ್ಷಣೆಯನ್ನೂ ಮಾಡಬೇಕಾಗುತ್ತದೆ. ಇದೇ ವೇಳೆ, ಮೂಳೆಗಳನ್ನು ಹೊರತೆಗೆಯಲಾಗಿದ್ದ ದೇಹದಲ್ಲಿ ಆ ಮೂಳೆಗಳ ಜಾಗದಲ್ಲಿ ಕೃತಕಮೂಳೆಗಳನ್ನು ಕೂರಿಸಿ ಶಸ್ತ್ರಚಿಕಿತ್ಸೆಯನ್ನು ನಡೆಸಿ, ಅನಂತರ ಸಂಬಂಧಿಸಿದವರಿಗೆ ಅಂತ್ಯಸಂಸ್ಕಾರವಿಧಿ ನೆರವೇರಿಸಲು ಅನುಕೂಲವಾಗುವಂತೆ ಅದನ್ನು ವಾಪಸ್ಸು ಮಾಡಬೇಕಾಗುತ್ತದೆ. ಹೀಗಾಗಿ, ಹಾಸನದಲ್ಲೋ, ಮೈಸೂರಿನಲ್ಲೋ ಅಥವಾ ವಿಜಯಪುರದಲ್ಲೋ ಯಾರಾದರೂ ಮೂಳೆದಾನ ಮಾಡಬೇಕೆಂದು ಕೊಂಡರೂ ಅವರಿಗೆ ಅದು ಅಷ್ಟು ಸುಲಭವಲ್ಲ. ಇದಕ್ಕಾಗಿ ಸಾಕಷ್ಟು ಮುಂಚಿತವಾಗಿಯೇ ನಿರ್ಧಾರ ಮಾಡುವ ಜೊತೆಗೆ ವೈದ್ಯರೊಂದಿಗೆ ಪೂರ್ವಸಮಾಲೋಚನೆ ನಡೆಸಿ ಸಂಪರ್ಕದಲ್ಲಿದ್ದರಷ್ಟೇ ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಇನ್ನು, ಜೀವಂತ ಮೂಳೆದಾನ ಪಡೆಯುವವರು ಅಧಿಕ ಹಣ ಭರಿಸಬೇಕಾಗುತ್ತದೆ. ಮೃತದೇಹದಿಂದ ಮೂಳೆಗಳನ್ನು ಹೊರತೆಗೆಯುವುದು, ಕೃತಕಮೂಳೆಗಳನ್ನು ಅಳವಡಿಸುವುದು, ತೆಗೆದ ಮೂಳೆಗಳ ಸಂಸ್ಕರಣೆ, ಅದಕ್ಕೆ ಬೇಕಾಗುವ ಉಪಕರಣವ್ಯವಸ್ಥೆ, ನಿರ್ವಹಣಾವೆಚ್ಚ, ದಾನಿಯ ದೇಹಕ್ಕೆ ಮೂಳೆಜೋಡಣೆಯ ಶಸ್ತ್ರಚಿಕಿತ್ಸೆ ಹೀಗೆ ಇಲ್ಲಿ ಹಲವಾರು ಕ್ರಿಯೆಗಳನ್ನು ಈ ಪ್ರಕ್ರಿಯೆ ಒಳಗೊಳ್ಳುವುದರಿಂದ ಸಹಜವಾಗಿಯೇ ಹೆಚ್ಚಿನ ವೆಚ್ಚ ತಗಲುತ್ತದೆ. ಆದರೆ, ಹಣಕ್ಕೆ ಯಾವುದೇ ತೊಂದರೆಯಿಲ್ಲದಿದ್ದರೆ ಜೀವೋತ ಮೂಳೆಯ ದಾನದಿಂದ ಅಷ್ಟೇ ದೊಡ್ಡಮಟ್ಟದ ಪ್ರಯೋಜನಗಳು ಕೂಡ ಇವೆ ಎನ್ನುವುದು ಪರಿಣತ ವೈದ್ಯರ ಅಭಿಪ್ರಾಯವಾಗಿದೆ.

ಜೀವಂತ ಮೂಳೆಯ ದಾನಕ್ಕೆ ಸಂಬಂಧಿಸಿದಂತೆ ಸಮಾಜ ಕ್ರಮಿಸಬೇಕಾದ ಹಾದಿ ಇನ್ನೂ ದೀರ್ಘವಾಗಿದೆ. ಇದು ಸಾಕಾರಗೊಳ್ಳಲು ಉತ್ತಮ ವ್ಯವಸ್ಥೆ, ದಾನಿಗಳ ಆಸಕ್ತಿ, ವೈದ್ಯಸಮೂಹದ ಕಾಳಜಿ ಹಾಗೂ ಸಾಮಾನ್ಯ ಜನರಲ್ಲಿ ಹೆಚ್ಚಿನ ಜಾಗೃತಿ ಅತ್ಯಗತ್ಯ.



ಡಾ.ವಿಕ್ರಮ್ ಶೆಟ್ಟಿ ಮತ್ತು ಅವರ ತಂಡದ ಇತರ ವೈದ್ಯರು ಶಸ್ತ್ರಚಿಕಿತ್ಸೆ ಮಾಡುತ್ತಿರುವುದು. ಮುಂಭಾಗದಲ್ಲಿರುವವರು ಡಾ.ವಿಕ್ರಮ್ ಶೆಟ್ಟಿ.

**ಈಶ್ವರ ಅವರ ಕುಟುಂಬದವರಿಂದ ಸರ್ವೋತ್ಕೃಷ್ಟ ಕಾರ್ಯ ನಡೆದಿದೆ. ರಸ್ತೆ ಅಪಘಾತದಲ್ಲಿ ತಲೆಗೆ ಬಿದ್ದ ಪೆಟ್ಟಿನಿಂದಾಗಿ ಮಿದುಳು ನಿಷ್ಕ್ರಿಯವಾಗಿದ್ದ ಸ್ಥಿತಿಯಲ್ಲಿದ್ದ ವ್ಯಕ್ತಿಯ ಕುಟುಂಬದವರಿಗೆ ಜೀವಂತ ಮೂಳೆದಾನದ ಬಗ್ಗೆ ಮನವರಿಕೆ ಮಾಡಿಕೊಡುವಲ್ಲಿ ಡಾ. ವಿಕ್ರಮ್ ಶೆಟ್ಟಿ ಮತ್ತು ಅವರ ನೇತೃತ್ವದ ತಂಡದವರು ಪ್ರಧಾನ ಪಾತ್ರವಹಿಸಿದರು. "ಇಂತಹ ಸಂದರ್ಭಗಳಲ್ಲಿ ದೇಹದ ಬೇರೆ ಅಂಗಾಂಗಗಳನ್ನು ದಾನಮಾಡಲು ಕೆಲವರಾದರೂ ಮುಂದಾಗುತ್ತಾರೆ. ಆದರೆ, ಮೂಳೆದಾನ ಮಾಡಲು ನಿರ್ಧಾರ ತೆಗೆದುಕೊಳ್ಳುವವರು ತುಂಬಾ ಕಡಿಮೆ. ಸಂಗ್ರಹಿಸಲಾಗಿರುವ ಜೀವಂತ ಮೂಳೆಗಳನ್ನು ಕನಿಷ್ಠ ಆರು ಜನರ ಮೂಳೆಗಳ ಮರುಜೋಡಣೆಗಾಗಿ ಬಳಸಬಹುದು. ಇದರಿಂದ ಮೂಳೆಗಳನ್ನು ಪಡೆದ ವ್ಯಕ್ತಿಗಳ ಬದುಕು ಮಾಮೂಲಿನ ಸ್ಥಿತಿಗೆ ಬಂದು ಅವರ ಬದುಕಿನ ಗುಣಮಟ್ಟ ಉತ್ತಮಗೊಳ್ಳುತ್ತದೆ. ಮೂಳೆಗಳನ್ನು ದಾನಮಾಡುವ ಮೂಲಕ ಈಶ್ವರ ಅವರ ಕುಟುಂಬದವರು ಸಮಾಜಕ್ಕೆ ದೊಡ್ಡಕಾಣಿಕೆಯನ್ನು ಸಲ್ಲಿಸಿದ್ದಾರೆ" ಎನ್ನುತ್ತಾರೆ ವಿಕ್ರಮ್ ಶೆಟ್ಟಿ ಅವರು.**

## ಸಾಹಸಶೀಲ ಮನೋಭಾವದ ಡಾ. ವಿಕ್ರಮ್‌ಶೆಟ್ಟಿ



**ಮೈಸೂರಿನ ಎಂ.ಎಂ.ಸಿ.ಯಲ್ಲಿ ಎಂ.ಬಿ.ಬಿ.ಎಸ್ ಮತ್ತು ದಾವಣಗೆರೆಯ ಜೆ.ಜೆ.ಎಂ. ಸಂಸ್ಥೆಯಲ್ಲಿ ಡಿ.ಆರ್ಥೊ ಮಾಡಿರುವ ಡಾ. ವಿಕ್ರಮ್‌ಶೆಟ್ಟಿ ಅವರು ಮಂಗಳೂರಿನ ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡೆಮಿಯಲ್ಲಿ (ಕ್ಷೇಮ) ಕಳೆದ ಇಪ್ಪತ್ತೆರಡು ವರ್ಷಗಳಿಂದ ವೃತ್ತಿನಿರತರಾಗಿದ್ದಾರೆ. ಸಿಂಗಪುರ ವಿಶ್ವವಿದ್ಯಾಲಯದಿಂದ 2019ರಲ್ಲಿ ಟಿಷ್ಯೂ ಬ್ಯಾಂಕಿಂಗ್‌ನಲ್ಲಿ ಡಿಪ್ಲೊಮಾ ಪಡೆದಿರುವ ಅವರು ಪ್ರಸ್ತುತ 'ಕ್ಷೇಮ'ದಲ್ಲಿ ಮೂಳೆ ವಿಭಾಗದ ಮುಖ್ಯಸ್ಥರು ಹಾಗೂ ಪ್ರೊಫೆಸರ್ ಆಗಿದ್ದಾರೆ. ಅವಕಾಶ ವಂಚಿತ ಕುಟುಂಬಗಳ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿರುವ ಅವರು ಶಟಲ್ ಬ್ಯಾಡ್ಮಿಂಟನ್ ಆಡುವುದರಲ್ಲೂ ಖುಷಿ ಕಾಣುವ ಅಭ್ಯಾಸವಿರಿಸಿಕೊಂಡಿದ್ದಾರೆ.**

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**